ಕೊಡುತ್ತಿಲ್ಲವಾದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿ ಪಟೇಲರಿಗೂ ಕೂಡ ಮಾಶಾಸನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸ್ವಾಮಿ, ನಮ್ಮ ತಂದೆಯವರೂ ಕೂಡ ಪಟೇಲರಾ.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಈ ಪಟೇಲರಿಗೆ ಮಾಸಾಶನ ಕೊಡುವುದು ಒಳ್ಳೆಯದು. ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಒಂದು ಸಾರಿ ಇದನ್ನು ಪರಿಶೀಲನೆ ಮಾಡೋಣ ಎಂದು ಹೇಳಿದ್ದರು.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇಷ್ಟು ಕಳಕಳಿಯಿಂದ ಒತ್ತಾಯ ಮಾಡುತ್ತಿರುವುದರಿಂದ, ತೋಟಿ, ತಳವಾರರಿಗೆ ಹಾಗೂ ಶಾನುಭೋಗರಿಗೆ ಯಾವ ರೀತಿಯಲ್ಲಿ ಮಾಸಾಶನ ಕೊಡುತ್ತಿದ್ದೇವೆಯೋ ಅದೇ ರೀತಿಯಲ್ಲಿ ಈ ಪಟೇಲರಿಗೂ ಕೊಡುವ ವ್ಯವಸ್ಥೆಯನ್ನು ಮಾಡೋಣ. ಇದು ಕಡೇ ಅಧಿವೇಶನವಾಗಿರುವಾಗ, ಇಷ್ಟು ಮಂದಿ ಸದಸ್ಯರು ಹೇಳಿದಮೇಲೆ, ಅವರಿಗೂ ಕೂಡ ಪೆನ್‌ಷನ್ ಕೊಡೋಣ.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ಪಟೇಲರುಗಳಿಲ್ಲರ ಪರವಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ಶಾನುಭೋಗರಿಂಗಳಿಗೆ, ತೋಟಿ ತಳವಾರುಗಳಿಗೆ ಪೆನ್‌ಷನ್ ಕೊಡುತ್ತೇವೆ. ಪಟೇಲರುಗಳು ಅನೇಕ ವರ್ಷಗಳಿಂದ ಸೇವೆ ಮಾಡಿದ್ದಾರೆ. ತಮ್ಮನ್ನು ಮಾತ್ರ ಬಿಟ್ಟಿದ್ದಾರೆನ್ನುವ ನಿರಾಶೆ ಅವರ ಮನಸ್ಸಿಗೆ ಬರುವುದು ಬೇಡ. ಅವರಿಗೂ ಕೂಡ ಇತರರಿಗೆ ಕೊಡುವಂತೆ ಮಾಸಾಶನವನ್ನು ಕೊಡುವುದಕ್ಕೆ ಸರ್ಕಾರ ಒಪ್ಪುತ್ತದೆ.

ಶ್ರೀ ಕೆ. ಭಾಸ್ಕರ ನಾಯಡು.—ಶ್ರೀಮಾನ್ ಶ್ರೀಕಂಠಯ್ಯನವರ ತಂದೆಯವರೂ ಕೂಡ ಪಟೇಲರಾಗಿದ್ದರು ಸ್ವಾಮಿ, ಅವರಿಗೂ ಕೂಡ ಪೆನ್‌ಷನ್ ಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರ ಹೇಳಿಕೆ

ವಿಷಯ : ವಿಧಾನಸಭೆಗೆ ಚುನಾವಣೆ ನಡೆಸುವ ಬಗ್ಗೆ.

ಅಧ್ಯಕ್ಷರು.—ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರೆ, ಸನ್ಮಾನ್ಯ ಸದಸ್ಯರೆ ಈ ದಿವಸ ಈ ಅಧಿವೇಶನದ ಕೊನೆ ದಿವಸ. ಈ ಅಧಿವೇಶನ ಆದಮೇಲೆ ಬಹಳಮಟ್ಟಿಗೆ ಮುಂದಿನ ಚುನಾವಣೆಯಾದ ಮೇಲೆ ಪುನಃ ಸೇರುವವರಿದ್ದೇವೆ. ಈ ಐದು ವರ್ಷಗಳ ಅವಧಿಯಲ್ಲಿ ನಾವು ಸಾರ್ವಜನಿಕರ ಹಿತದೃಷ್ಟಿಯಿಂದ ಈ ಮನೆಯಲ್ಲಿ ಕೆಲಸಕಾರ್ಯಗಳನ್ನು ಮಾಡಿದ್ದೇವೆ. ಕೆಲಸ ಕಾರ್ಯಗಳನ್ನು ಮಾಡುವಾಗ ಒಂದೊಂದು ಸಾರೆ ನಮ್ಮ ಮನಸ್ಸಿನ ವಿಕಾರಗಳ ಫಲವಾಗಿ ಇನ್ನೇನಾದರೂ ಪ್ರಸ್ತಾಪ ಮಾಡಿರಬಹುದು. ಅದನ್ನು ಯಾರೂ ಮನಸ್ಸಿನಲ್ಲಿಟ್ಟುಕೊಳ್ಳಬಾರದೆಂದು ನಾನು ಮಾನ್ಯ ಸದಸ್ಯರಲ್ಲಿ ವಿನಂತಿಮಾಡಿ ಕೊಳ್ಳುತ್ತೇನೆ. ವೈಯಕ್ತಿಕವಾಗಿ ನಾನು ಏನಾದರೂ ಈ ಸಭೆಯ ಅಧ್ಯಕ್ಷನಾಗಿ ಕೆಲಸ ಮಾಡುವಾಗ ಸದಸ್ಯರಿಗೆ ಯಾರಿಗಾದರೂ ಕೂಡ ಒಂದು ಮಾತು ಮೀರಿ ಮಾತನಾಡಿದ್ದರೆ ಯಾರೂ ಅನ್ಯಥಾ ಭಾವಿಸಬಾರದೆಂ. ಹಾಗೆ ಮಾತನಾಡಿದ್ದರೂ ಸಭೆಯ ಕಾರ್ಯಕಲಾಪಗಳ ದೃಷ್ಟಿಯಿಂದ ಮಾತನಾಡಿದ್ದೇನೆಂದು ನಾನು ಅಂದುಕೊಂಡಿದ್ದೇನೆ. ಹಾಗೆಂದು ಭಾವಿಸಿಕೊಂಡು, ಒಂದು ವೇಳೆ ಯಾರ ಮನಸ್ಸಿಗಾದರೂ ನೋವಾಗಿದ್ದರೆ ಕ್ಷಮಿಸಬೇಕೆಂದು ಈ ಸಭೆಯಲ್ಲಿ ತಮ್ಮನ್ನು ಕೇಳಿಕೊಳ್ಳುತ್ತಾ, ಎಲ್ಲರೂ ಪುನಃ ಚುನಾವಣೆಗೆ ಹೋಗುವವರಿದ್ದೀರಿ. ಚುನಾವಣೆಯಲ್ಲಿ ಸ್ಪರ್ಧೆ ಮಾಡತಕ್ಕಂಥ ಎಲ್ಲರಿಗೂ ಕೂಡ ಜಯ ದೊರೆತು, ಅವರು ಜಯಶೀಲರಾಗಿ ಮತ್ತೆ ಬಂದು ಈ ಕನ್ನಡ ರಾಜ್ಯದ ಉದ್ಧಾರ ಮಾಡುವಂತಾಗಬೇಕು. ಈ ರಾಜ್ಯವನ್ನು ವ್ಯವಸ್ಥಿತವಾಗಿ ಕಟ್ಟಿ ಬೆಳೆಸಿ ಇಡೀ ರಾಷ್ಟ್ರದಲ್ಲೇ ಉತ್ತಮವಾದಂತಹ ರಾಜ್ಯವೆನ್ನುವ ಹೆಸರನ್ನು ಹರಡಂಥ ಶಕ್ತ ರಾಜಕಾರಣಿಗಳಾಗಿರಿ ಎಂದು ತಮಗೆಲ್ಲರಿಗೂ ಮತ್ತೊಮ್ಮೆ ಶುಭಕೋರುತ್ತೇನೆ. ಆದರಲ್ಲೂ ವಿರೋಧ ಪಕ್ಷದವರು ಯಾವಾಗಲೂ ಕೂಡ ಅಧ್ಯಕ್ಷರ ಹೆಚ್ಚಿನ ಮನ್ನಣೆಗೆ ಅರ್ಹರಾಗಿರುತ್ತಾರೆ. ಕಾರಣ ಇಷ್ಟೆ ಬಹುಮತದಿಂದ ಸಭೆ ತನ್ನ ಕಾರ್ಯಕಲಾಪಗಳನ್ನು ಮಾಡುವಾಗ ಅಲ್ಪಸಂಖ್ಯಾತರಾದ ವಿರೋಧ ಪಕ್ಷದವರು ತಮ್ಮ ಅಭಿಪ್ರಾಯಗಳನ್ನು ನೇರವಾಗಿ, ಸ್ಪಷ್ಟವಾಗಿ ಹೇಳುವುದಕ್ಕೆ ಅನುಕೂಲವಾದಂಥ ವಾತಾವರಣವನ್ನು ನಿರ್ಮಿಸಿ ಅದರ ರಕ್ಷಣೆ ಮಾಡತಕ್ಕಂಥ ಗೌರವ ಮತ್ತು ಹೊಣೆ ಕೂಡ ಅವರದ್ದೇ

ಆಗಿರುತ್ತದೆ. ಈ ದೃಷ್ಟಿಯಿಂದ ಈ ಸಭೆಯ ಕಾರ್ಯಕಲಾಪಗಳನ್ನು ನಿರ್ವಹಿಸುವಾಗ ಇದಕ್ಕೆ ಏನಾದರೂ, ಏಲ್ಲಿಯಾದರೂ ಸ್ವಲ್ಪ ಚ್ಯುತಿಬರುವ ರೀತಿಯಲ್ಲಿ ನಡೆದುಕೊಂಡರೆ ಅನ್ಯಥಾ ಭಾವಿಸ ಬಾರದೆಂದು ಹೇಳುತ್ತೇನೆ, ಮತ್ತೆ, ನಾಳೆ ನಮ್ಮ ಸದಸ್ಯರ ಒಂದು ಕಾರ್ಯಕ್ರಮ ಇದೆ. ಲೆಜಿಸ್ಲೇಚರ್ ಸೆಕ್ರೆಟರಿಯೇಟ್‌ನಿಂದ ಏರ್ಪಾಡಾಗಿರುವ ಈ ಕಾರ್ಯಕ್ರಮ ಪಕ್ಷಾತೀತವಾಗಿ ನಡೆಯತಕ್ಕಂಥ ಕಾರ್ಯ ಕ್ರಮ. ಯಾವುದೇ ಪಕ್ಷಭೇಧವಿಲ್ಲದೆ ಆಡಳಿತ ಪಕ್ಷವಾಗಲೀ, ವಿರೋಧ ಪಕ್ಷವಾಗಲಿ, ಯಾವ ಬೇಧ ಭಾವವೂ ಇಲ್ಲದೆ ನಾವೆಲ್ಲರೂ ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಕೋರುತ್ತೇನೆ. ಇವತ್ತು ಚುನಾವಣಾ ಆಯೋಗದಿಂದ ಚುನಾವಣೆ ಬಗ್ಗೆ ಪ್ರಕಟಣೆ ಇಷ್ಟು ಬೇಗನೆ ಬರುತ್ತದೆಂದು ನಮಗೆ ಗೊತ್ತಿರಲಿಲ್ಲ. ಈ ಸಂದರ್ಭದಲ್ಲಿ ತಾವು ತಮ್ಮ ಮನಸ್ಸಿನಲ್ಲಿ ಏನಿದ್ದರೂ ಕೂಡ ಅದನ್ನು ಬದಿಗರಿಸಿ ಬಂದು ಸಹಕರಿಸಬೇಕು. ಏಕೆಂದರೆ, ನಾವು ಮತ್ತೆ ಯಾರ ಯಾರು ಇರುತ್ತೇವೋ ಗೊತ್ತಿಲ್ಲ. ನಾಳೆ, ಏನಾಗುತ್ತದೆ ಎಂದು ಹೇಳಂವುದಕ್ಕೆ ಬರುವುದಿಲ್ಲ. ಇರುವಾಗ ನಾವು ಇದ್ದುದು ಜ್ಞಾಪಕಕ್ಕೆ ಬರುವಂತಿದ್ದರೆ ಒಳ್ಳೆಯದು. ಈ ದೃಷ್ಟಿಯಿಂದ ಎಲ್ಲರೂ ಸಹಕರಿಸಬೇಕು. ಲೆಜಿಸ್ಲೇಚರ್ ಸೆಕ್ರೆಟರೇಯೇಟ್ ಈ ಕಾರ್ಯಕ್ರವವನ್ನು ಏರ್ಪಡಿಸುವುದಕ್ಕೆ ಮಾನ್ಯ ಮಂತ್ರಿಗಳು ಅನುಕೂಲ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಇದೇನೂ ಸರ್ಕಾರದ ವತಿಯಿಂದ ಆಡಳಿತ ಪಕ್ಷದ ವತಿಯಿಂದ ನಡೆಯತಕ್ಕಂಥಾದ್ದಲ್ಲ. ಆದ್ದರಿಂದ ಈ ಕಾರ್ಯ ಕ್ರಮದಲ್ಲಿ ತಾವೆಲ್ಲರೂ ಭಾಗವಹಿಸಬೇಕೆಂದು ಮತ್ತೊಮ್ಮೆ ತಮ್ಮೆಲ್ಲ. ರನ್ನೂ ಕೇಳಿಕೊಂಡು ಏನಾದರೂ ಅಚಾತುರ್ಯ ನಡೆದಿದ್ದರೆ, ಯಾರ ಮನಸ್ಸಿಗಾದರೂ ನೋವಾಗು ವಂತಹ ಪರಿಸ್ಥಿತಿ ನನ್ನಿಂದಾಗಿದ್ದರೆ ಕ್ಷಮಿಸಬೇಕು ಎಂದು ಕೋರಿ, ಎಲ್ಲರಿಗೂ ಶುಭಹಾರೈಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಗುಂಡೂರಾವ್ (ಸನ್ಮಾನ್ಯ ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಬಹುಶಃ ಚುನಾವಣಾ ಕಮೀಷನರ್‌ರವರು ನಮ್ಮ ಶಾಸನ ಸಭಾಧಿವೇಶನ ಮುಗಿಯುವ ದಿನಕ್ಕೆ ಸರಿಯಾಗಿ ಈ ಚುನಾವಣಾ ತಾರೀಖಿನ್ನು ಈಗಾಗಲೇ ಪ್ರಕಟಿಸಿದ್ದಾರೆ. ಅನೇಕ ತಿಂಗಳುಗಳಿಂದ ಈ ಒಂದು ಪ್ರಶ್ನೆ ಯಾವಾಗಲೂ ವಿವಿಧ ರೂಪದಲ್ಲಿ ಬರುತ್ತಿತ್ತು. ನಾನು ಪತ್ರಿಕಾಗೋಷ್ಠಿ ಕರೆದಾಗ, ಡೆಲ್ಲಿಗೆ ಹೋಗಿ ಬರುವಾಗ, ಮತ್ತು ಕಳೆದ ಶಾಸನ ಸಭಾಧಿವೇಶನದಲ್ಲಿ ಎಲ್ಲಾ ಸದಸ್ಯರೂ, ಶ್ರೀಮಾನ್ ಮೈಕಲ್‌ರನ್ನು ಒಳಗೊಂಡು ಚುನಾವಣೆ ಯಾವಾಗ ಬರುತ್ತದೆಂದು ಕೇಳುತ್ತಿದ್ದರು.

ಶ್ರೀ ಮೈಕಲ್ ಬಿ ಫರ್ನಾಂಡೀಸ್.—ನಿಮಗೇ ಗೊತ್ತಿರಲಿಲ್ಲ. ಫೆಬ್ರವರಿಯಲ್ಲಿ ಆಗಬಹುದೆಂದು ನೀವು ಹೇಳಿದ್ದು ಈವತ್ತೂ ಕೂಡ ಪತ್ರಿಕೆಯಲ್ಲಿ ಬಂದಿದೆ. ಇದರಿಂದ ನಿಮಗೆ ಅವಮಾನವಾಗಬೇಕು.

ಶ್ರೀ ಆರ್. ಗುಂಡೂರಾವ್.—ಅದೇ ಪ್ರಕಾರ ನಮ್ಮ ಅವಧಿ ಫೆಬ್ರವರಿವರೆಗೂ ಇದೆಯಲ್ಲ. ಕಳೆದ ಒಂದು ಸಂದರ್ಭದಲ್ಲಿ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಚುನಾವಣೆ ನಡೆಯಬಹುದು ಎಂದು ಹೇಳಿದ್ದೆ. ಅದು ಈಗ ಜನವರಿಯಲ್ಲೇ ಆಗುತ್ತಿದೆ ಹಾಗೆಂದು ಎಲೆಕ್ಷನ್ ಕಮೀಷನರ್‌ರು ಪ್ರಕಟಿಸಿ ದ್ದಾರೆ. ಇವತ್ತು ಈ ಅಧಿವೇಶನದ ಕೊನೆಯ ದಿವಸ ಬೇರೆ. ಇದು ಕೊನೆಯ ಅಧಿವೇಶನ ಕೂಡ. ಇಲ್ಲದೇ ಹೋದರೆ ನಾಳೆ ಆಸೆಂಬ್ಲಿ ಇದ್ದಿದ್ದರೆ ನಾವು ಇಷ್ಟು ಲವಲವಿಕೆಯಿಂದ ಇರುತ್ತಿರಲಿಲ್ಲ. ನಿನ್ನೆ ದಿವಸ ಕೆಲವು ವಿರೋಧ ಪಕ್ಷದವರು ಇರಲಿಲ್ಲ. ಇವತ್ತು ಅವರು ಇದ್ದಾರೆ. ನಾನು ೧೯೭೮ನೇ ಇಸವಿ ಯಲ್ಲಿ ಈ ಸಭೆಗೆ ಸದಸ್ಯನಾಗಿ ಸೇರಿದ ಮೇಲೆ ಒಂದು ವರ್ಷ ಏಳು ತಿಂಗಳ ಕಾಲ ಮಂತ್ರಿಯಾಗಿದ್ದೆ. ಅನಂತರ ವಿರೋಧ ಪಕ್ಷದ ನಾಯಕನಾಗಿ ಮೂರು ತಿಂಗಳ ಕಾಲ ಇದ್ದೆ. ನಂತರ ೧೯೮೦ನೇ ಇಸವಿ ಜನವರಿ ೧೦ನೇ ತಾರೀಖಿನಿಂದ ಮುಖ್ಯಮಂತ್ರಿಯಾಗಿದ್ದೇನೆ. ಆದರೆ ನಾನು ಪ್ರಮಾಣ ವಚನ ಸ್ವೀಕರಿಸಿದ್ದು ೧೨ನೇ ತಾರೀಖಿಗೆ. ೧೨ನೇ ತಾರೀಖಿನಿಂದ ಈ ಸಭೆಯ ನಾಯಕನಾಗಿ, ಈ ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಕೆಲಸ ಮಾಡಿದ್ದೇನೆ. ಈ ಮೂರು ವರ್ಷಗಳ ನನ್ನ ಅನುಭವದಲ್ಲಿ ಬಹುಶಃ ಅನೇಕ ಸಮಸ್ಯೆಗಳು ನಮ್ಮ ರಾಜ್ಯದಲ್ಲಿ ಉದ್ಭವವಾದವು. ಅದಕ್ಕೆ ನಾನಾ ಕಾರಣಗಳಿವೆ. ಯಾರಾದರೂ ಸಮಸ್ಯೆಗಳನ್ನು ಉದ್ಭವ ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಆದರೂ ಕೂಡ ಹಲವಾರು ಸಮಸ್ಯೆಗಳು ಬಂದವು. ಇವುಗಳ ಬಗ್ಗೆ ವಿಧಾನಸಭೆಯೊಳಗೆ ಚರ್ಚೆಗೆ ಬಂದಾಗ ಎರಡೂ ಕಡೆಯ ಸನ್ಮಾನ್ಯ ಸದಸ್ಯರು ಅಂದರೆ ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಏನು ಕಾರ್ಯ ಮಾಡಬೇಕೋ ಅದನ್ನು ಅವರು ಮಾಡಿದ್ದಾರೆ. ಮತ್ತು ಮಾಡುತ್ತಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಎಂತಹ ಸಮಯದಲ್ಲೂ ಸಹ ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಕಳೆದ ಮೂರು ವರ್ಷಗಳಿಂದ ನನಗೆ ಪ್ರೀತಿ ವಿಶ್ವಾಸಗಳಿಂದ ಕೂಡಿದ ಸಹಕಾರವನ್ನು ನೀಡಿದ್ದಾರೆ. ಇಡೀ ಸದನದ ಆಡಳಿತ ಪಕ್ಷ

ಮತ್ತು ವಿರೋಧ ಪಕ್ಷದ ಎಲ್ಲಾ ಸದಸ್ಯರೂ ಸಹ ಈ ರಾಜ್ಯದ ಆಡಳಿತವನ್ನು ಮೂರು ವರ್ಷಗಳಿಂದ ನಡೆಸಿಕೊಂಡು ಹೋಗಲಿಕ್ಕೆ ಅವರವರ ಶಕ್ತಿಮಿರಿ ಸಹಾಯ ಮಾಡಿದ್ದಾರೆ. ರಾಜ್ಯದ ಆಡಳಿತ ನಡೆಸ ಬೇಕಾದರೆ ಮತ್ತು ವಿಧಾನ ಸಭೆಯಲ್ಲಿ ಅನೇಕ ಸಂದರ್ಭಗಳಲ್ಲಿ ಪರಸ್ಪರ ವಾಗ್ಯುದ್ಧ ನಡೆಯಬೇಕಾದರೆ ಅನೇಕ ಸಾರಿ ಅಭಿಪ್ರಾಯ ಬೇಧ ಬರುವುದು ಸ್ವಾಭಾವಿಕ. ಆದರೆ ಯಾವುದನ್ನೂ ಕೂಡ ಈ ಸದನದ ಹೊರಗಡೆ ತೆಗೆದುಕೊಂಡು ಹೋಗದೆ, ಸದನದ ಒಳಗೆ ಮಾತ್ರ ಚರ್ಚೆಗೆ ಮಾಸಲಾಗಿಟ್ಟು, ಅತಿಶಯ ವಾದಂಥ ಹೆಚ್ಚಿನ ಸಹಕಾರ ತೋರಿ ಪ್ರೀತಿಯಿಂದ ನಡೆದುಕೊಂಡಿದ್ದಾರೆ, ಅದೇ ರೀತಿ ನಡೆಸಿಕೊಟ್ಟಿದ್ದಾರೆ. ಅದೇ ಪ್ರಕಾರ ಹಿಂದೆ ನಾನು ಮುಖ್ಯಮಂತ್ರಿ ಆದ ಮೇಲೆ ಸ್ವಲ್ಪ ಕಾಲ ಶ್ರೀಮಾನ್ ಪಿ. ವೆಂಕಟರಮಣ ಅವರು ಈ ಸಭೆಯ ಅಧ್ಯಕ್ಷರಾಗಿದ್ದರು. ಅನಂತರ ಅವರು ಮಂತ್ರಿಮಂಡಲಕ್ಕೆ ಸೇರಿದ ಮೇಲೆ ತಾವು ಆ ಸ್ಥಾನವನ್ನು ಅಲಂಕರಿಸಿದಿರಿ ತಾವು ಆ ಸ್ಥಾನವನ್ನು ಅಲಂಕರಿಸಿದ ಮೇಲೂ ಸಹ ಕಳೆದ ೩ ವರ್ಷ ಗಳಲ್ಲಿ ಎಲ್ಲಾ ಸದಸ್ಯರ ಮನಸ್ಸಿಗೆ ತೃಪ್ತಿಯಾಗುವಂಥ ರೀತಿಯಲ್ಲಿ ಮತ್ತು ಯಾರ ಮನಸ್ಸಿಗೂ ಯಾವುದೇ ನೋವಾಗದ ರೀತಿಯಲ್ಲಿ ನಡೆದುಕೊಂಡಿದ್ದೀರಿ. ಅನೇಕ ಸಂದರ್ಭಗಳಲ್ಲಿ ತಮ್ಮ ಕೆಲಸ ಬಹಳ ಕಷ್ಟದ ಕೆಲಸ. ಏಕೆಂದರೆ, ಮಾನ್ಯ ಸದಸ್ಯರು ಅವರವರ ಕ್ಷೇತ್ರದ ಬಗ್ಗೆ ಹೆಚ್ಚಿಗೆ ಮಾತನಾಡಲಿಕ್ಕೆ ಆಗಲಿಲ್ಲವಲ್ಲ ಎಂದು ಒತ್ತಾಯಪಡಿಸುತ್ತಾ ಇರತಕ್ಕಂಥಾದ್ದು ಸಾಮಾನ್ಯ. ಆದರೂ ಯಾವಾಗಲೂ ತಾಳ್ಮೆಯನ್ನು ಕಳೆದುಕೊಳ್ಳದೆ ಎಲ್ಲ ಸದಸ್ಯರಿಗೂ ಅವಕಾಶ ಮಾಡಿಕೊಟ್ಟಿದ್ದೀರಿ. ಅಲ್ಲದೆ ಆಡಳಿತ ಪಕ್ಷದವರಿಂದಲೂ ಮತ್ತು ವಿರೋಧ ಪಕ್ಷದವರಿಂದಲೂ ಎರಡೂ ಕಡೆಯಿಂದಲೂ ಹೆಚ್ಚಿನ ವಿಶ್ವಾಸ ಮತ್ತು ಪ್ರೀತಿಯನ್ನು ಪಡೆದಿದ್ದೀರಿ. ಈ ಒಂದು ಸಭೆ ಇವತ್ತು ಮುಗಿಯುವ ದಿನವೇ ಚುನಾವಣೆಯ ಸುದ್ದಿ ಬಂದಿದೆ ಇವೆರಡೂ ಸಂತೋಷದ ಸುದ್ದಿಗಳು. ಏಕೆಂದರೆ, ಚುನಾವಣೆ ಬೇಗ ಬಂತು. ಚುನಾವಣೆ ಫೆಬ್ರವರಿ ತಿಂಗಳಲ್ಲಿ ನಡೆಯಬಹುದೂ ಎಂದು ನನ್ನ ಮನಸ್ಸಿನಲ್ಲಿತ್ತು. ಆದರೆ ಚುನಾವಣೆ ಜನವರಿ ೫ನೇ ತಾರೀಖು ಎಂದು ನಿಗದಿಮಾಡಿದ್ದಾರೆ. ಒಂದು ತಿಂಗಳ ಮೊದಲೇ ಆಗುತ್ತದೆ. ೫ ತಿಂಗಳು, ೬ ತಿಂಗಳು ಮೊದಲು ಚುನಾವಣೆ ದಿನಾಂಕ ಗೊತ್ತಾದರೆ ಸಮಸ್ಯೆಗಳು ಬೇಕಾದಷ್ಟು ಇರುತ್ತವೆ. ಆಗ ಅಭ್ಯರ್ಥಿ ಗಳಿಗೆ ಕಷ್ಟ.

ಶ್ರೀ ಎಸ್. ಬಂಗಾರಪ್ಪ.—ಫೆಬ್ರವರಿಯಲ್ಲಿ ಚುನಾವಣೆಯಾಗಬಹುದು ಎಂದು ಪದೇ ಪದೇ ಹೇಳುತ್ತಿದ್ದೀರಿ.

ಶ್ರೀ ಆರ್. ಗುಂಡೂರಾವ್.—ಜನವರಿ ಅಥವಾ ಫೆಬ್ರವರಿಯಲ್ಲಿ ಯಾವಾಗಲಾದರೂ ಚುನಾವಣೆ ಮಾಡಬಹುದು ಎಂದು ಹೇಳಿದೆ.

ಶ್ರೀ ಸಿ. ಎಂ. ಇಬ್ರಾಹಿಂ.—ಫೆಬ್ರವರಿಯಲ್ಲಿ ಚುನಾವಣೆ ಆಗುತ್ತಾ ಇರುವುದರಿಂದ ಅವರ ಲೆಕ್ಕಾಚಾರ ತಪ್ಪಿಹೋಯಿತು.

ಶ್ರೀ ಆರ್. ಗುಂಡೂರಾವ್ — ಜನವರಿಗೂ, ಫೆಬ್ರವರಿಗೂ ಒಂದು ತಿಂಗಳು ವ್ಯತ್ಯಾಸ. ಒಂದು ತಿಂಗಳಲ್ಲಿ ಏನೂ ವ್ಯತ್ಯಾಸ ಆಗುವುದಿಲ್ಲ. ಅಭ್ಯರ್ಥಿಗಳಿಗೆ ಸ್ವಲ್ಪ ಖರ್ಚು ಮಿಕ್ಕುತ್ತದೆಯೇ ಹೊರತು ಮತ್ತೆ ಏನಿಲ್ಲ. ಆದ್ದರಿಂದ ಇಷ್ಟೊಂದು ಸಹಕಾರ ನೀಡಿದಂಥ ಈ ಸದನದ ಎಲ್ಲ ಸದಸ್ಯರಿಗೂ ಆಡಳಿತ ಪಕ್ಷದ ಸದಸ್ಯರಿಗೂ, ವಿರೋಧಪಕ್ಷದ ಸದಸ್ಯರಿಗೂ ಎಲ್ಲರಿಗೂ ಈ ಸಭೆಯ ನಾಯಕನಾಗಿ ನಾನು ಅತ್ಯಂತ ಚಿರಋಣಿಯಾಗಿದ್ದೇನೆ ಮತ್ತು ಎಲ್ಲರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಅದೇ ಪ್ರಕಾರ ತಾವು ಅನೇಕ ಸಂದರ್ಭಗಳಲ್ಲಿ ನೀಡಿದಂಥ ಸಹಕಾರ ಮತ್ತು ತಾಳ್ಮೆಗೆ ತಮಗೂ ಸಹ ಮೆಚ್ಚುಗೆ ಯನ್ನು ವ್ಯಕ್ತಪಡಿಸಬೇಕಾಗುತ್ತದೆ ಏಕೆಂದರೆ, ಚುನಾವಣೆ ಕಳೆದ ಮೇಲೆ ಹೊಸ ೭ನೇ ವಿಧಾನಸಭೆ ಬರುತ್ತದೆ, ಇದು ೬ನೇ ವಿಧಾನಸಭೆ. ಇನ್ನು ಹೊಸದಾಗಿ ಬರುವವರು ಸೇರಿ ಹೊಸ ಸರ್ಕಾರವನ್ನು ರಚನೆ ಮಾಡಬೇಕಾಗುತ್ತದೆ. ಇದು ಅಧಿವೇಶನದ ಕೊನೆಯ ದಿವಸ. ಆದುದರಿಂದ ಅಧ್ಯಕ್ಷರಿಗೂ ಮತ್ತು ಎಲ್ಲಾ ಸದಸ್ಯರಿಗೂ ಅವರು ನೀಡಿದಂಥ ಸಹಕಾರಕ್ಕೆ ಮತ್ತು ಪ್ರೀತಿವಿಶ್ವಾಸಕ್ಕಾಗಿ ನಾನು ಈ ಸಭೆಯ ನಾಯಕನಾಗಿ ಸರ್ಕಾರದ ಪರವಾಗಿಯೂ ಮತ್ತು ಸದನದ ಪರವಾಗಿಯೂ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತೆ ತಾವೇ ಹೇಳಿದ ಹಾಗೆ, ನಾಳೆ ಲೆಜಿಸ್ಲೇಚರ್ ಡೇ. ಅದರ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಲೆಜಿಸ್ಲೇಚರ್ ಡೇನಲ್ಲಿ ಎಲ್ಲರೂ ಭಾಗವಹಿಸಿ ಸಂತೋಷದಿಂದ ಕಾಲ ಕಳೆಯಬೇಕು. ಅದನ್ನು ಸರ್ಕಾರ ನಡೆಸುತ್ತಾ ಇಲ್ಲ. ಲೆಜಿಸ್ಲೇಚರ್ ಡೇಯನ್ನು ತಮ್ಮ ಲೆಜಿಸ್ಲೇಚರ್ ಸೆಕ್ರೆಟರಿಯೇಟ್ ನಡೆಸುತ್ತಾ ಇರುವ ದೆಸೆಯಿಂದ ಎಲ್ಲರೂ ಸೇರಿ ಆ ಒಂದು ದಿನವನ್ನು ಅಂದರೆ ಫೇರ್‌ವೆಲ್ ಡೇಯನ್ನು ಆಚರಣೆ ಮಾಡಿ ನಿರ್ಗಮಿಸೋಣ, ಬಹಳ ಸಂತೋಷ. ಅದೇ ಪ್ರಕಾರ

ಪತ್ರಿಕಾ ಪ್ರತಿನಿಧಿಗಳೂ ಸಹ ಯಾವಾಗಲೂ ಸದನದಲ್ಲಿ ನಡೆದಂಥ ವಿಷಯಗಳ ಬಗ್ಗೆ ಸಾಕಷ್ಟು ಪ್ರಚಾರ ವನ್ನೂ, ಸಾಕಷ್ಟು ವಿವರವನ್ನು ನಮ್ಮ ರಾಜ್ಯದ ಜನತೆಗೆ ತಿಳಿಸಲು ಸಹಕಾರ ನೀಡಿದ್ದಾರೆ. ಈ ಸದನದ ನಾಯಕನಾಗಿ ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಮತ್ತು ಪ್ರತಿಯೊಬ್ಬರಿಗೂ ಅಭಿನಂದನೆ ಗಳನ್ನು ಸಲ್ಲಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಲಕ್ಷ್ಮೀಸಾಗರ್ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೆ, ನಾನು ಈ ಸಭೆಗೆ ಮೊಟ್ಟಮೊದಲನೇ ಸಲ ಚುನಾಯಿತನಾಗಿ ಬಂದದ್ದು ೧೯೭೮ನೇ ಇಸವಿಯಲ್ಲಿ. ಪ್ರಾರಂಭದಲ್ಲಿ ವಿರೋಧಪಕ್ಷದ ಉಪನಾಯಕನಾಗಿದ್ದೆ. ಸ್ವಲ್ಪಕಾಲದ ನಂತರ ಅಫಿಷಿಯಲ್ಲಾಗಿ ವಿರೋಧಪಕ್ಷ ಇಲ್ಲದೇ ಇರತಕ್ಕ ಸಮಯವಿತ್ತು. ನಂತರ ಯು.ಡಿ.ಎಫ್. ಎಂದು ರಚನೆಯಾಗಿ ಅದರ ನಾಯಕನಾಗಿ ಫೆಬ್ರುವರಿ ತಿಂಗಳಿಂದ ನಾನು ಈ ಸಭೆಯಲ್ಲಿ ಕೆಲಸ ಮಾಡುತ್ತಾ ಇದ್ದೇನೆ. ಈ ಅಲ್ಪ ಸಮಯದಲ್ಲಿ ಮತ್ತು ನಾನೂ ವಿಧಾನಸಭೆಯ ಸದಸ್ಯನಾಗಿದ್ದಂಥ ಸಮಯದಲ್ಲಿ ತುಂಬ ತಿಳುವಳಿಕೆ ಮತ್ತು ಅನುಭವ ಪಡೆಯು ವುದಕ್ಕೆ ಅನುಕೂಲವಾಗಿದೆಯೆಂದು ನಾನು ಭಾವಿಸುತ್ತೇನೆ. ನಾನು ಈ ಸಭೆಯ ಸದಸ್ಯನಾಗಿರುವುದ ಕ್ಕಿಂತ ಮೊದಲೂ ಈ ಸಭೆಯ ಕಾರ್ಯಕಲಾಪಗಳ ಬಗ್ಗೆ ಮತ್ತು ಇದಕ್ಕೆ ಸಂಬಂಧಪಟ್ಟ ಸಾಹಿತ್ಯದ ಬಗ್ಗೆ ಸ್ವಲ್ಪಮಟ್ಟಿಗಾದರೂ ವ್ಯಾಸಂಗಮಾಡಿ ತಿಳಿದುಕೊಂಡಿದ್ದರೂ ಸ್ವಂತ ಅನುಭವ ಎಲ್ಲಕ್ಕಿಂತಲೂ ಉತ್ತಮ ವಾದ ತಿಳುವಳಿಕೆಯನ್ನು ಕೊಡುತ್ತದೆ ಎನ್ನುವ ವಿಚಾರ ನನಗೆ ಇದರಿಂದ ಗೊತ್ತಾಯಿತು. ಅದು ಹೇಗಾದರೂ ಇರಲಿ. ಒಟ್ಟಿನಲ್ಲಿ ಇದರಿಂದ ಹೆಚ್ಚಿನ ಅನುಭವ ಪಡೆಯುವುದಕ್ಕೆ ಅನುಕೂಲವಾಯಿತು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಈ ಸಭೆಯ ಕಾರ್ಯಕಲಾಪಗಳಲ್ಲಿ ಪೂರ್ಣ ವಾದಂಥ ಆಸಕ್ತಿವಹಿಸಿ ಕೆಲಸ ಮಾಡುವುದಕ್ಕೆ ಪ್ರಯತ್ನಮಾಡಿದ್ದೇನೆಂದು ನಾನು ಪ್ರಮಾಣಿಕವಾಗಿ ಹೇಳಬಲ್ಲೆ. ಅದು ಸಮರ್ಪಕವಾಗಿತ್ತೋ, ಅಸಮರ್ಪಕವಾಗಿತ್ತೋ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಇತರೇಯವರು ಹೇಳಬೇಕು. ನನ್ನ ಮಟ್ಟಿಗೆ ಹೇಳುವುದಾದರೆ, ಸಾಕಷ್ಟು ಪ್ರಯತ್ನಮಾಡಿ ಬೇರೆಯವ ರಿಂದ ವಿಷಯ ತಿಳಿದುಕೊಳ್ಳುವುದಕ್ಕೆ ಪ್ರಯತ್ನಮಾಡಿ ಮತ್ತು ಅನೇಕ ಮೂಲಗಳಿಂದ ವಿಷಯ ಸಂಗ್ರಹಣೆ ಮಾಡಿ ಇಲ್ಲಿ ಬರತಕ್ಕಂಥ ವಿಷಯಗಳ ಬಗ್ಗೆ ಹೊಸ ಬೆಳಕನ್ನು ಚೆಲ್ಲುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನಮಾಡಿ ಸ್ವಲ್ಪಮಟ್ಟಿಗಾದರೂ ಸಫಲನಾಗಿದ್ದೇನೆ ಎನ್ನತಕ್ಕಂಥಾ ಸಮಾಧಾನ ನನ್ನ ಮನಸ್ಸಿ ನಲ್ಲಿದೆಯೆಂದು ನಾನು ಭಾವಿಸುತ್ತೇನೆ. ಅದು ಹೇಗಾದರೂ ಇರಲಿ. ಈ ಸಭೆಯಲ್ಲಿ ೫ ವರ್ಷಗಳ ಅವಧಿಯಲ್ಲಿ ಹಲವಾರು ಘಟನೆಗಳನ್ನು ಕಂಡಿದ್ದೆ. ಹಲವಾರು ವಿಷಯಗಳ ಬಗ್ಗೆ ತೀವ್ರವಾದಂಥ ಗಂಭೀರತೆಯಿಂದ ಮತ್ತು ಒಂದೊಂದು ಸಲ ಗಲಭೆಯಿಂದ ಕೂಡಿದಂಥ ವಾತಾವರಣದಲ್ಲಿ ಈ ಸಭೆಯಲ್ಲಿ ಕಾರ್ಯಕಲಾಪಗಳು ನಡೆದಿವೆ. ಆದರೆ ತಾವು ಹೇಳಿದಹಾಗೆ ಮತ್ತು ಮಾನ್ಯ ಸಭಾ ನಾಯಕರು ಹೇಳಿದ ಹಾಗೆ ವಿಷಯ ಪ್ರಸ್ತಾಪಕ್ಕೆ ಬಂದಾಗ, ವಿಷಯ ಸಭೆಯ ಮುಂದಿದ್ದಾಗ ವಿರೋಧಪಕ್ಷದವರಾದ ನಾವು ಸರ್ಕಾರದಲ್ಲಿ ಕಂಡುಬರಬಹುದಾದ ವಿರುಪೇರುಗಳನ್ನು ಮತ್ತು ಲೋಪದೋಷಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಇತರ ವಿಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದೊಂದು ಸಲ ವಿಷಯ ನಿರೂಪಣೆಯಲ್ಲಿರುವಾಗ ನಾವು ಹೇಳತಕ್ಕಂಥಾದ್ದು ಸರ್ಕಾರದ ಕಿವಿಗೆ ಕರ್ಕಷವಾಗಿ ಕಾಣಬಹುದು. ಆದರೆ ಎಲ್ಲಾ ನಾಣ್ಯಗಳಿಗೆ ಎರಡು ಮುಖ ಇರುವ ಹಾಗೆ ಸರ್ಕಾರ ಒಂದು ಮುಖ, ಜನತಾ ಪ್ರತಿನಿಧಿಗಳು ಇನ್ನೊಂದು ಮುಖ ಎನ್ನುವುದನ್ನು ತೋರಿಸುವುದಕ್ಕೆ ಪರಿಣಾಮಕಾರಿಯಾಗಿ ಪ್ರಯತ್ನ ಮಾಡಿದ್ದೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಾದ ನಂತರ ಮಾನ್ಯ ಮುಖ್ಯಮಂತ್ರಿಗಳು ಚುನಾವಣೆ ಬಗ್ಗೆ ಪ್ರಸ್ತಾಪ ಮಾಡಿ ಅದು ಒಂದು ಭಾಗ ಎಂದು ಹೇಳಿದರು. ಅದು ಹೇಗಾದರೂ ಇರಲಿ. ಆದರೆ ಈ ಸಭೆಯಲ್ಲಿ ಚುನಾವಣೆ ಬಗ್ಗೆ ಪ್ರಸ್ತಾಪ ಮಾಡಿದಾಗ, ಹೊರಗಡೆ ಪತ್ರಿಕಾ ಪ್ರತಿನಿಧಿಗಳನ್ನು ಭೇಟಿ ಮಾಡಿದಾಗ, ಸಾರ್ವಜನಿಕ ವೇದಿಕೆಗಳ ಮೇಲೆ ಚುನಾವಣಾ ತಾರೀಖಿನ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಿದಾಗ ಜನವರಿ ಮೊದಲನೇ ವಾರದಲ್ಲಿ ವಿಶ್ವ ಕನ್ನಡ ಸಮ್ಮೇಳನವಿದೆ, ಆದಾದನಂತರ ಚುನಾವಣೆಯಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ ಇದಾದ ನಂತರ ನಿನ್ನೆ, ಮೊನ್ನೆಯ ಪತ್ರಿಕಾ ವರದಿಗಳ ಪ್ರಕಾರ ಆಳುವ ಪಕ್ಷದ ಸದಸ್ಯರನ್ನು ಉದ್ದೇಶಿಸಿ ಮಾತನಾಡತಕ್ಕಂಥ ಸಮಯದಲ್ಲಿ ಫೆಬ್ರುವರಿ ಮೊದಲನೇ ವಾರ ದಲ್ಲಿ ಅಂದರೆ ೬-೨-೮೩ನೇ ತಾರೀಖಿನಲ್ಲಿ ಚುನಾವಣೆ ಆಗಬಹುದು ಎಂದು ಗೊತ್ತಾಗಿದೆ. ಈ ವಿಷಯ, ವರದಿ ಪತ್ರಿಕೆಗಳಲ್ಲಿ ಬಂದಿರುವುದು ಮಾತ್ರವಲ್ಲದೆ, ನಮಗೆ ಬೇರೆ ಮೂಲಗಳಿಂದಲೂ ಗೊತ್ತಾಗುತ್ತದೆ ಎಂದು ಹೇಳಿರತಕ್ಕಂಥಾ ವಿಚಾರ ನಮಗೆ ಗೊತ್ತಾಗಿರತಕ್ಕಂಥಾದ್ದು, ಪಿ.ಟಿ.ಐ. ನಲ್ಲಿ ಎಲೆಕ್ಷನ್ ಕಮಿಷನ್ ನಿಂದ ಬಂದಂಥ ವರದಿಯನ್ನು ನಾನು ಕೇಳಿಸಿಕೊಂಡೆ.

೩–೫೦ ಪಿ. ಎಂ.

ಅಲ್ಲಿ ಏನು ಹೇಳಿದ್ದಾರೆಂದರೆ, ತ್ರಿಪುರಾದಲ್ಲಿ ೧೯–೧೧–೧೯೮೩ರ ಹೊತ್ತಿಗೆ ಅಲ್ಲಿಯ ವಿಧಾನ ಸಭಾ ಅವಧಿ ಮುಗಿಯುತ್ತದೆ. ಆ ಕಾರಣಕೋಸ್ಕರವಾಗಿ ಆಂಧ್ರ ಮತ್ತು ಕರ್ನಾಟಕದಲ್ಲೂ ಕೂಡ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವ ಬಗ್ಗೆ ಚುನಾವಣೆ ಆಯೋಗದವರು ನಿರ್ಣಯವನ್ನು ಕೈಗೊಂಡಿದ್ದಾರೆ ಎನ್ನುವ ವಿಷಯವನ್ನು ಪಿ.ಟಿ.ಐ. ರವರು ಮತ್ತು ಯು.ಎನ್.ಐ. ರವರು ತಿಳಿಸಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಇದೆಲ್ಲಾ ತೀರ್ಮಾನವಾಗಿದೆ ಎನ್ನುವ ಹಾಗೆ ಮಾತನ್ನು ಹೇಳಿದರು. ಆದುದರಿಂದ ಈ ಸಮಯದಲ್ಲಿ ತಮ್ಮ ಮುಖಾಂತರ ಒಂದು ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಚುನಾವಣಾ ದಿನ ನಿಗದಿ ಪಡಿಸಿರುವುದರಿಂದ ವಿರೋಧ ಪಕ್ಷದವರಿಗೆಲ್ಲಾ ಭಯವಾಗಿ ಬಿಟ್ಟಿದೆ ಏನೋ ಎನ್ನುವ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆ ಹಿನ್ನೆಲೆಯಲ್ಲಿ ಹೇಳುವುದಾದರೆ, ನಾವು ಸದಾ ಸದ್ಧರಾಗಿರುತ್ತೇವೆ. ವಿರೋಧ ಪಕ್ಷದವರು ಯಾವಾಗಲೂ ಸಹ ಚುನಾವಣೆಗೆ ಸದಾ ಸನ್ನದ್ಧರಾಗಿಯೇ ಇರುತ್ತಾರೆ. ಏತಕ್ಕೆಂದರೆ, ನಾವು ಇಲ್ಲಿಗೆ ಸೋತು ಬಂದಿರತಕ್ಕವರು. ಆದುದರಿಂದ ಸದಾ ಸನ್ನದ್ಧರಾಗಿಯೇ ಇರುತ್ತೇವೆ. ಆದರೆ ನಿಜವಾಗಿಯೂ ಭಯ ಪಡಬೇಕಾಗಿರತಕ್ಕವರು ಆಳುವ ಪಕ್ಷದವರು. ಆಕಸ್ಮಾತ್ ಚುನಾವಣೆ ಬೇಗ ಬಂದು ಬಿಟ್ಟರೆ ಹೇಗೆ ಎಂದು ಆಳುವ ಪಕ್ಷದವರಿಗೆ ಭಯವಿರಬಹುದು.

ಒಬ್ಬ ಸದಸ್ಯರು.—ಈ ಸಾರಿ ಕೂಡ ಸೋಲುತ್ತೀರಿ ಎಂದು ಮನವರಿಕೆಯಾಗಿರಬಹುದಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಆದುದರಿಂದ ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ಕರ್ನಾಟಕ ಸರ್ಕಾರಕ್ಕೆ ತಿಳಿಯದೇ ಚುನಾವಣಾ ಕಮಿಷನರ್‌ರವರಾಗಲೀ, ಇಲ್ಲವೇ ಕೇಂದ್ರ ಸರಕಾರದವರಾಗಲೀ ಚುನಾವಣಾ ತಾರೀಖಿನ್ನು ಗೊತ್ತು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕದ್ದು ನನ್ನ ತಿಳುವಳಿಕೆಗೆ ಬಂದ ವಿಚಾರವಾಗಿದೆ. ನಾನು ಡೆಲ್ಲಿಗೆ ಹೋಗಿ ಇದರ ಬಗ್ಗೆ ವಿಚಾರ ಕೂಡ ಮಾಡಿಕೊಂಡು ಬಂದಿದ್ದೇನೆ.

ಶ್ರೀ ಸಿ. ಎಂ ಇಬ್ರಾಹಿಂ.—ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಈಗ ಆದೆಲ್ಲಾ ವಿಚಾರ ಏತಕ್ಕೆ ? ಈಗ ಚುನಾವಣಾ ದಿನವನ್ನು ಗೊತ್ತು ಮಾಡಿದ್ದು ಆಗಿದೆ. ಚುನಾವಣೆಗೆ ಸಿದ್ಧರಾಗೋಣ. ಗೊತ್ತಿದ್ದೋ ಗೊತ್ತಿಲ್ಲದೆಯೋ ಮಾಡಿದ್ದಾರೆ, ನಾವು ೫ವರ್ಷ ಎಲ್ಲಾ ಇಲ್ಲಿ ೫ ವರ್ಷಗಳಿಂದ ಒಟ್ಟಿಗೆ ಇದ್ದು ಕೆಲಸ ಮಾಡಿದ್ದೇವೆ, ಹೋಗುವಾಗ ಸಂತೋಷದಿಂದ ಹೋಗೋಣ. ಮಾನ್ಯ ಮುಖ್ಯಮಂತ್ರಿಗಳವರೂ ಊಟಕ್ಕೆ ಕರೆದಿದ್ದಾರೆ. ನೀವೂ ಊಟಕ್ಕೆ ಕರೆದಿದ್ದೀರಿ ಸಂತೋಷ, ನಾವು ನೀವು ರಾಜಿಯಾಗಿ ಆನಂತರ ಜನತಾ ಜನಾರ್ಧನರೆ ಮುಂದೆ ಹೋಗೋಣ ಈಗ ಪಂತ್ಯ ತಕರಾರು ಮಾಡದೇ ದಯವಿಟ್ಟು ನಾಲ್ಕು ಒಳ್ಳೆಯ ಮಾತುಗಳನ್ನು ಹೇಳಿ ನಿಮ್ಮ ಮಾತನ್ನು ಮುಕ್ತಾಯ ಮಾಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆದುದರಿಂದ ಸರ್ಕಾರ, ಆಡಳಿತಾತ್ಮಕ ಯಂತ್ರ, ಚುನಾವಣೆಯನ್ನು ನಡೆಸುವುದಕ್ಕೆ ಸಿದ್ಧವಾಗಿದೆಯೆಂದು ಹೇಳದ ಹೊರತು ಚುನಾವಣಾ ಆಯೋಗ ತನ್ನಿಷ್ಟ ಬಂದ ಹಾಗೆ ತಾರೀಖಿನ್ನು ಗೊತ್ತು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ನನ್ನ ಸಾಮಾನ್ಯ ತಿಳುವಳಿಕೆಯ ಜ್ಞಾನದಿಂದ ತಮ್ಮ ಮೂಲಕ ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಶ್ರೀ ಇಬ್ರಾಹಿಂರವರು ಆದಷ್ಟು ಒಳ್ಳೆಯ ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಂಗಿಸುವ ಬಗ್ಗೆ ತಿಳಿಸಿದ್ದಾರೆ. ಸ್ವಪ್ರಜ್ಞೆಯಿಂದ, ಸ್ವಇಚ್ಛೆಯಿಂದ, ಮನಸ್ಸಿನ ಹತೋಟಿಯಿಂದ, ಬದಲಿಕರುವವರೆಗೂ ಯಾರ ಒಂದು ಪ್ರಭಾವಕ್ಕೂ ಸಂಪೂರ್ಣವಾಗಿ ಒಳಗಾಗದೇ ಮಾತನಾಡತಕ್ಕ ಚೇಷ್ಟೆಯಾಗಲೀ, ಚಿಂತನೆಯಾಗಲೀ ಅಥವಾ ಚೈತನ್ಯವಾಗಲೀ ನನ್ನಲ್ಲಿ ಇಲ್ಲ ಎನ್ನತಕ್ಕ ಮಾತನ್ನು ಬಹಳ ವಿನಮ್ರವಾಗಿ ನಾನು ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಈ ಸಭೆಯ ಕಾರ್ಯಕಲಾಪಗಳು ೫ ವರ್ಷಗಳ ಅವಧಿಯಲ್ಲಿ ನನ್ನ ದೃಷ್ಟಿಯಲ್ಲಿ ರಾಜ್ಯದ ಹಿತದೃಷ್ಟಿಯಿಂದ ಹೇಳುವುದಾದರೆ, ಚೆನ್ನಾಗಿಯೇ ನಡೆದಿವೆಯೆಂದು ಕೊನೆಯ ದಿವಸವಾದ ಇಂದು ನಾನು ತಮ್ಮಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳವರು ಸುಮಾರು ೩ ವರ್ಷಗಳ ಅವಧಿಯಲ್ಲಿ ಸಭಾ ನಾಯಕರಾಗಿ ಮತ್ತು ರಾಜ್ಯದ ಮುಖ್ಯಮಂತ್ರಿಗಳಾಗಿ ಹಲವಾರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅಷ್ಟಕ್ಕೆಲ್ಲಾ ನಾವು ಬೆಂಬಲವನ್ನು ಕೊಟ್ಟಿದ್ದೇವೆ. ಆದರೆ ಕೆಲವೊಂದು ಪ್ರಸಂಗಗಳಲ್ಲಿ ಅವರು ಇಷ್ಟಂಥ ಹೆಜ್ಜೆ ರಾಜ್ಯದ ಹಿತದೃಷ್ಟಿಯಿಂದ ಸರಿಯಿಲ್ಲ ಎನ್ನತಕ್ಕ ಮಾತನ್ನೂ ಕೂಡ ಅಷ್ಟೇ ಕಠಿಣವಾಗಿ ನಿರ್ಭಯ

ವಾಗಿ ಈ ಸಮಯದಲ್ಲಿ ತಿಳಿಸಂವುದಕ್ಕೆ ಇಷ್ಟಪಡುತ್ತೇನೆ. ವಿರೋಧ ಪಕ್ಷದವರು ಮತ್ತು ಆಳುವ ಪಕ್ಷದವರಿಬ್ಬರೂ ಪ್ರಜಾಪ್ರಭುತ್ವದಲ್ಲಿ ಒಂದು ಗಾಡಿಗೆ ಎರಡು ಗಾಲಿಗಳು ಇದ್ದ ಹಾಗೆ. ಈ ಎರಡು ಗಾಲಿಗಳು ಇದ್ದರೆ ಗಾಡಿ ಸರಿಯಾಗಿ ಓಡುತ್ತದೆ ಮತ್ತು ಗಾಡಿಗೆ ಬ್ರೇಕ್ ಇದ್ದ ಹಾಗೆ ಈ ವಿರೋಧ ಪಕ್ಷ. ಗಾಡಿಗೆ ಬ್ರೇಕ್ ಇಲ್ಲದಿದ್ದರೆ ಏನಾಗುತ್ತದೆ ಎನ್ನುವುದು ಮಾನ್ಯ ಶ್ರೀ ಗುಂಡೂರಾಯರಿಗೆ ಚೆನ್ನಾಗಿ ಗೊತ್ತಿದೆ. ಏತಕ್ಕೆಂದರೆ, ಅವರು ಮಲೆನಾಡಿನಿಂದ ಬಂದಿರತಕ್ಕವರು, ನಾವು ಬಯಲು ಸೀಮೆಯವರು, ಬಯಲು ಸೀಮೆಯವರಿಗೆ ಬ್ರೇಕ್ ಇಲ್ಲದಿದ್ದರೂ ಪರವಾಗಿಲ್ಲ, ಮಲೆನಾಡಿನ ಕಡೆ ಬ್ರೇಕ್ ಇರಲೇ ಬೇಕು ಈ ದಿಶೆಯಲ್ಲಿ ನಾವು ನಮ್ಮ ಕರ್ತವ್ಯವನ್ನು ಮಾಡಿದ್ದೇವೆ. ನಂತರ ಮಾನ್ಯ ಅಧ್ಯಕ್ಷರವರು ಹಲವಾರು ವರ್ಷಗಳಿಂದ ಹಿರಿಯ ಸದಸ್ಯರಾಗಿದ್ದಾರೆ, ಮೇಲಾಗಿ ಕಾನೂನು ಮಂತ್ರಿಗಳಾಗಿದ್ದವರು, ಮತ್ತೆ ಅನೇಕ ಸಾರಿ ಸರ್ಕಾರದ ನೀತಿ ನಿಯಮಗಳನ್ನು ರೂಪಿಸುವುದರಲ್ಲಿ ಭಾಗಿಯಾಗಿದ್ದರು. ಇಂಥವರ ನೇತೃತ್ವದಲ್ಲಿ ಈ ಸಭೆಯ ಕಾರ್ಯ ಕಲಾಪಗಳು ಚೆನ್ನಾಗಿ, ಸುಗಮವಾಗಿ ನಡೆದುಕೊಂಡು ಬಂದಿದೆ ಎನ್ನತಕ್ಕ ನಂಬಿಕೆ ನನಗಿದೆ. ಆದರೆ ಸಭೆಯ ಕಾರ್ಯಕಲಾಪಗಳನ್ನು ನಡೆಸುವಾಗ ಕೆಲವೊಂದು ಪ್ರಸಂಗಗಳಲ್ಲಿ ತಮಗೂ ಮತ್ತು ನನಗೂ ವಾಗ್ಯುದ್ಧ ನಡೆದಿರಬಹುದು, ಮಾತಿನ ಚಕಮಕಿ ನಡೆದಿರಬಹುದು, ಆದರೆ ಯಾವತ್ತೂ ಅದು ವೈಯಕ್ತಿಕ ಮಟ್ಟಸಗಲ್ಲಿ ನಡೆದಿಲ್ಲ ಎನ್ನುವುದನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಮಂತ್ರಿ ಮಂಡಲದವರು ಹಾಗೂ ಮಾನ್ಯ ಸದಸ್ಯರುಗಳು ಈ ಸಭೆಯ ಕಾರ್ಯಕಲಾಪಗಳಿಗೆ ಮೆರುಗನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನತಕ್ಕ ಒಂದು ನೆನಪು ನನ್ನ ಮನಸ್ಸಿನಲ್ಲಿದೆ ಎನ್ನುವುದನ್ನು ತಮ್ಮ ಮುಂದೆ ಬಹಳ ವಿನಯದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ವಿಧಾನ ಮಂಡಲದ ಅಧಿಕಾರ ವರ್ಗದವರು, ಅದರಲ್ಲೂ ಕಾರ್ಯದರ್ಶಿಯವರು ಮತ್ತು ಅವರ ಸಿಬ್ಬಂದಿವರ್ಗದವರು ಹಾಗೂ ವರದಿಗಾರರೂ ಕೂಡ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ ಎನ್ನತಕ್ಕ ವಿಚಾರವನ್ನು ನಾನೂ ಸಹ ತಿಳಿದುಕೊಂಡಿದ್ದೇನೆ ಮತ್ತು ಅದು ನನ್ನ ಸ್ವಂತ ಅನುಭವದಲ್ಲಿಯೂ ಇದೆ. ಮೇಲಾಗಿ ಹೊರಗಡೆ ಜನಕ್ಕೆ ಇಲ್ಲಿ ಏನು ನಡೆಯುತ್ತಿದೆ ಎನ್ನುವ ಬಗ್ಗೆ, ಈ ಸಭೆಯ ಕಾರ್ಯಕಲಾಪಗಳನ್ನು ಅರ್ಥಪೂರ್ಣವಾದ ವಿವರಣೆಯನ್ನು ಕೊಡತಕ್ಕ ಕಾರ್ಯದಲ್ಲಿ ನಮ್ಮ ಪತ್ರಿಕಾ ಪ್ರತಿನಿಧಿಗಳೂ ಕೂಡ ಸಹಾಯ ಮಾಡಿದ್ದಾರೆ ಮತ್ತು ಅವರುಗಳು ನಮ್ಮೊಡನೆ ಬಹಳ ಸಹಾನುಭೂತಿಯಿಂದ, ಸಹೃದಯತೆಯಿಂದ ನಡೆದುಕೊಂಡಿದ್ದಾರೆ. ಆದುದರಿಂದ ಈ ಸಭೆ ಅಂದರೆ ೬ನೇ ಅಧಿವೇಶನ ಚೆನ್ನಾಗಿ ಕೆಲಸ ಮಾಡಿದೆಯೆಂದು ತಿಳಿದುಕೊಂಡಿದ್ದೇನೆ. ಎಲ್ಲಾ ವಿಚಾರಗಳೂ ಕೂಡ ಸಮರ್ಪಕವಾಗಿ ನಡೆದಿದೆಯೆಂದು ಹೇಳುವುದಕ್ಕೆ ಸಾಧ್ಯವಾಗದೆ ಹೋದರೂ ಕೂಡ ಕಾನೂನಿನ ಚೌಕಟ್ಟಿನಲ್ಲಿ ಮತ್ತು ನಿಯಮಾವಳಿಗಳ ಚೌಕಟ್ಟಿನಲ್ಲಿ, ಆಷ್ಟೇ ಪರಿಣಾಮಕಾರಿಯಾಗಿ ಈ ಸಭೆಯನ್ನು ನಡೆಸುವುದಕ್ಕೆ ಪ್ರಯತ್ನ ಇಲ್ಲಿ ನಡೆದಿದೆ ಎನ್ನತಕ್ಕ ಮಾತನ್ನು ಘಂಟಾಘೋಷವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಹೇಳಿ ಎಲ್ಲರಿಗೂ ಒಳ್ಳೆಯದಾಗಲಿ ಎಂದು ನನ್ನ ಪರವಾಗಿ, ಮತ್ತು ನಮ್ಮ ಪಕ್ಷದ ಎಲ್ಲರ ಪರವಾಗಿಯೂ ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ, ಮಂತ್ರಿಮಂಡಲದ ಸದಸ್ಯರಿಗೆ, ಮಾನ್ಯ ಸದಸ್ಯರುಗಳಿಗೆ, ಎಲ್ಲಾ ಅಧಿಕಾರ ವರ್ಗದವರಿಗೂ ಮತ್ತು ನಮ್ಮ ವಿಧಾನ ಮಂಡಲದ ಅಧಿಕಾರ ವರ್ಗದವರಿಗೂ ಮತ್ತು ಪತ್ರಿಕಾ ಪ್ರತಿನಿಧಿಗಳಿಗೂ ಮತ್ತೊಮ್ಮೆ ನನ್ನ ಧನ್ಯವಾದಗಳನ್ನು ಅರ್ಪಿಸಿ, ನನ್ನ ಭಾಷಣವನ್ನು ಮುಂಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—(ಸೊರಬ).— ಮಾನ್ಯ ಅಧ್ಯಕ್ಷರೇ, ನಾನು ಮತ್ತು ತಾವು ಕೆಲವಾರು ವರ್ಷಗಳಿಂದ ಈ ಸದನದ ಸದಸ್ಯರಾಗಿದ್ದೇವೆ. ಅದೇ ರೀತಿ. ಅನೇಕ ಜನ ಮಿತ್ರರಿದ್ದಾರೆ. ನನಗಿಂತಲೂ ಕೂಡ ಮೊದಲು ತಾವು ಮೂರಿಗೆರೆ ಕ್ಷೇತ್ರದಿಂದ ಈ ಸದನಕ್ಕೆ ಬಂದವರು. ನಾನು ೧೯೭೭ ರಿಂದ ಈ ಮನೆಯ ಸದಸ್ಯನಾಗಿದ್ದೇನೆ. ನಾನು ಮೊದಲ ಸಾರಿ ಸದಸ್ಯನಾಗಿ ಈ ಶಾಸನ ಸಭೆಗೆ ಕಾಲಿಟ್ಟಾಗ ಶ್ರೀಮಾನ್ ಗುಂಡೂರಾಯರು ಬಂದಿರಲಿಲ್ಲ. ಅವರು ೧೯೭೮ ರಿಂದ ಈ ಮನೆಯ ಸದಸ್ಯರಾಗಿದ್ದಾರೆಂದು ನನ್ನ ನೆನಪು. ನನ್ನ ಅನಿಸಿಕೆ ಏನೆಂದರೆ, ಸಭೆಯ ಕಾರ್ಯ ಕಲಾಪಗಳು ನಡೆಯಂತಕ್ಕ ದಿಸೆಯಲ್ಲಿ ನಾವು ಒಂದು ವಿಷಯವನ್ನು ಗಮನದಲ್ಲಿಟ್ಟುಕೊಂಡು ನಮ್ಮ ಕಲಾಪಗಳನ್ನು ನಡೆಸಬೇಕಾಗುತ್ತದೆ. ಈ ಸದನದ ಘನತೆ ಕುಂಠಿತವಾಗದ ರೀತಿಯಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಂಬಿರುವ ನಾವು ಅವು ಬೆಳೆಯುವುದಕ್ಕೆ ಪೂರ್ಕವಾಗಿ ಯಾವ ರೀತಿ ನಮ್ಮ ಕೊಡುಗೆಯನ್ನು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದರ ಮೂಲಕ ಕೊಡಬೇಕೋ ಆ ರೀತಿ ಕೊಡುತ್ತಿದ್ದೇವೆ. ಪ್ರತಿಯೊಬ್ಬ ಸದಸ್ಯರೂ ತಮ್ಮದೇ ಆದ ರೀತಿಯಲ್ಲಿ ಸಹಕಾರ ಕೊಟ್ಟಿದ್ದಾರೆ. ನಾಳೆ ದಿವಸ ನಾವು ಚುನಾವಣೆಯಲ್ಲಿ ಗೆಲ್ಲಬಹುದು ಅಥವಾ ಸೋಲಬಹುದು, ನಾವು ಪ್ರತಿನಿಧಿಸುವ ಗೆದ್ದು ಬಂದರೆ ಪುನಃ

ಪರಸ್ಪರ ಭೇಟಿಯಾಗುತ್ತೇವೆ. ಒಂದು ವೇಳೆ ಒಬ್ಬರಿಬ್ಬರು ಸೋತರೆ ಈ ಸದನದಲ್ಲಿ ಸೇರುವುದಕ್ಕಾಗುವುದಿಲ್ಲ. ಏನಿದ್ದರೂ ಹೊರಗಡೆ ಸೇರಿ ವಿಚಾರಗಳನ್ನು ಚರ್ಚೆ ಮಾಡಬಹುದು. ಈ ಒಂದು ವೇದಿಕೆ ಏನಿದೆ ಇದನ್ನು ಅಂದರೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಿಕೊಂಡು ಬರತಕ್ಕ ದಿಸೆಯಲ್ಲಿ ಮಹತ್ತರವಾದ ಕೊಡುಗೆಯನ್ನು ಇನ್ನೂ ದೊಡ್ಡ ಪ್ರಮಾಣದಲ್ಲಿ ಕೊಡಬೇಕೋ ಏನೋ ಎಂದು ನನ್ನ ಅನಿಸಿಕೆ. ತಾವು ಕೂಡ ಆ ರೀತಿ ಭಾವಿಸುತ್ತೀರೆಂಬ ನಂಬಿಕೆಯಿಂದ ಮಾತನಾಡುತ್ತಿದ್ದೇನೆ. ಸರ್ಕಾರ ನಡೆಸತಕ್ಕ ಸಂದರ್ಭದಲ್ಲಿ ತಪ್ಪುಗಳು ನಮ್ಮ ಕಡೆ ಆಥವಾ ಆ ಕಡೆಯಂದ ನಡೆದಿರಬಹುದು? ಇಲ್ಲವೆಂದು ಹೇಳುವುದಿಲ್ಲ. ಆ ಬಗ್ಗೆ ಪರಸ್ಪರ ಕ್ಷಮೆ ಇರಲಿ ಎಂಬ ಭಾವನೆಯಿಂದ ಹೋಗದ್ದಿದ್ದರೆ ತಪ್ಪಾಗುತ್ತದೆ. ೧೯೬೭ ರಿಂದ ನಾನು ನೋಡುತ್ತಾ ಬಂದಿದ್ದೇನೆ ಮತ್ತು ಬೇರೆ ಯಾವುದೇ ಒಂದು ಅಭಿಪ್ರಾಯದಿಂದ ಹೇಳುತ್ತಿಲ್ಲ. ಹಿಂದೆ ಕೂಡ ಬೇಕಾದಷ್ಟು ಘಟನೆಗಳು ನಡೆದಿವೆ. ಕೆಲವೊಮ್ಮೆ ನಾವು ನಮ್ಮ ಗೆರೆಯನ್ನು ದಾಟಿ ಹೋದೆವೋ ಏನೋ ಎಂಬ ಭಾವನೆ ಬಂದಾಗ, ಅದಕ್ಕೆ ಕಡಿವಾಣ ಹಾಕದಿದ್ದರೆ ನಾವು ಪ್ರಜಾಪ್ರಭುತ್ವದ ಮೌಲ್ಯಗಳು ಏನಿವೆ ಅವನ್ನು ಬೆಳೆಸತಕ್ಕ ದಿಸೆಯಲ್ಲಿ ಕೊಡುಗೆ ಕೊಡಲಾಗುವು ಎಂದು ನನಗಾದರೂ ಅನ್ನಿಸುತ್ತದೆ. ಅನೇಕ ಸಾರಿ ಆ ರೀತಿ ಆಗಿದೆ. ಈ ದಿಸೆಯಲ್ಲಿ ವಿವರಕ್ಕೆ ಹೋಗಬೇಕಾಗಿಲ್ಲ. ನಾವು ನಮ್ಮ ವರ್ತನೆಯನ್ನು ಸೇರಿಸಿ ಏನೊಂದು ಕಾರ್ಯ ನಿರ್ವಹಣೆ ಮಾಡುತ್ತೇವೆ ಆದರ ಬಗ್ಗೆ ಪುನರಾಲೋಚನೆ ಮಾಡುವುದು ಒಳ್ಳೆಯದೆಂದು ನನ್ನ ಅನಿಸಿಕೆ. ಅದನ್ನು ಮಾಡಿದರೆ ಮುಂದೆ ಬರತಕ್ಕ ಪೀಳಿಗೆಗೆ ದೊಡ್ಡ ಕೊಡುಗೆಯನ್ನು ಕೊಟ್ಟಂತಾಗುತ್ತದೆ. ಜನತಾ ಪ್ರತಿನಿಧಿಗಳಾದ ನಾವು ಏನನ್ನು ಬಿಟ್ಟು ಹೋಗುತ್ತೆವೆ ಬದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಕರ್ತವ್ಯವನ್ನು ಮಾಡಿದರೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ. ತಮಗೆ ಗೊತ್ತಿರುವ ಹಾಗೆ ನಾವೂ ಕೂಡ ಆದೇ ರೀತಿ ರಾಜಕೀಯ ಜೀವನವನ್ನು ನಡೆಸಿಕೊಂಡು ಬಂದಿದ್ದೇವೆ, ಇಲ್ಲಿಯೂ ಕೂಡ ಕುಳಿತು ಕೆಲಸ ಮಾಡಿದ್ದೇವೆ ಮತ್ತು ಅಲ್ಲಿಯೂ ಕೂಡ ಕುಳಿತು ಕೆಲಸ ಮಾಡಿದ್ದೇವೆ. ಅಧಿಕಾರ ಮುಖ್ಯವಲ್ಲ ಅಥವಾ ಯಾವುದೇ ಒಂದು ಸ್ಥಾನ ಮಾನ ಮುಖ್ಯವಲ್ಲ, ನಾವು ಇರತಕ್ಕ ಒಂದು ಜಾಗದಲ್ಲಿ ಕುಳಿತಾಗ ನಮ್ಮ ಕರ್ತವ್ಯವನ್ನು ನಿರ್ವಂಚನೆಯಿಂದ, ಸ್ಪಷ್ಟವಾಗಿ ಪ್ರಾಮಾಣಿಕವಾಗಿ ಮಾಡುವುದಕ್ಕೆ ಆತ್ಮ ವಿಶ್ವಾಸ ಇರಬೇಕು. ಅದಕ್ಕೆ ವಂಚನೆ ಮಾಡಿದರೆ ಏನೂ ಸಾಧನೆ ಮಾಡಿದಂತಾಗುವುದಿಲ್ಲ, ಮಾಡುವುದಕ್ಕೂ ಆಗುವುದಿಲ್ಲವೆಂಬುದು ನನ್ನ ಸ್ಪಷ್ಟವಾದ ನಂಬಿಕೆ. ೧೯೬೭ ರಿಂದ ೧೯೭೭ ರ ಅಡಿ ಭಾಗದವರೆಗೆ ನಾನು ಇಲ್ಲಿ ಕುಳಿತು ಕೆಲಸ ಮಾಡತಕ್ಕ ಸಂದರ್ಭದಲ್ಲಿ ತಮಗೆ ಒಂದು ಮಾತು ಹೇಳಿದ್ದು ನೆನಪಿದೆ. ನಾನು ಮತ್ತು ಮಾನ್ಯ ಅಜೀಜ್‌ಸೇಟರು ಹಿಂದುಗಡೆ ಕೂರುತ್ತಿದ್ದೆವು ಆಗ ತಾವು ಈ ಕಡೆ ಕುಳಿತ ನೆನಪು. ಆಗ ಏತಕ್ಕೆ ಇಷ್ಟು ಜೋರಾಗಿ ಕೂಗುತ್ತೀರಿ. ಎಂದು ಹೇಳಿದ್ದೀರಿ. ಕೆಲವೊಮ್ಮೆ ಇಷ್ಟು ಜೋರಾಗಿ ಕೂಗುವುದು ಅನಿವಾರ್ಯಕವೆಂಬ ಭಾವನೆ ಬರುತ್ತದೆ. ಆದರೆ ಒಂದೊಂದು ಸಾರಿ ಆ ಭಾವನೆ ಬಂದಾಗ ಹೇಳಬೇಕೆನಿಸುತ್ತದೆ ಮತ್ತು ಹೇಳಬೇಕಾಗುತ್ತದೆ. ಅನೇಕ ವೇಳೆ ನಮ್ಮ ಮನಸ್ಸಿನಲ್ಲಿರತಕ್ಕ ವಿಚಾರಗಳನ್ನು ವಿಚಾರ ಮಾಡಿದಾಗ ಎಷ್ಟೋ ಅನುಭವಗಳನ್ನು ಹೇಳುವಾಗ ಕೆಲವೊಂದು ವಿಚಾರಗಳನ್ನು ಮರೆತು ಬಿಟ್ಟಿರುತ್ತೇವೆ. ಅದು ತಮ್ಮ ಅನುಭವಕ್ಕೂ ಬಂದಿರಬಹುದು. ಇನ್ನು ನಾವು ಇಲ್ಲಿಂದ ಹೊರಡುವಾಗ ಯಾವ ರೀತಿಯ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಹೊರಡಬೇಕು. ನಾವು-ನೀವು ಚುನಾವಣೆಗೆ ಹೋದಾಗ ಅಲ್ಲಿ ಪರಸ್ಪರ ಮಾತನಾಡಬೇಕಾಗುತ್ತದೆ. ಅಲ್ಲಿಯೂ ಕೂಡ ನಾವು ಪ್ರಜಾಪ್ರಭುತ್ವದ ಎಲ್ಲೆ ಮೀರಿ ಹೋಗಬಾರದೆಂಬುದನ್ನು ಮನಸ್ಸಿನಲ್ಲಿಟುಕೊಂಡಿದ್ದರೆ ಬಹಳ ಒಳ್ಳೆಯದು ತಮಗೆ ಇವೆಲ್ಲ ಗೊತ್ತಿಲ್ಲ ವೆಂಬ ಭಾವನೆಯಿಂದ ನಾನು ಮಾತನಾಡುತ್ತಿಲ್ಲ. ಸಾಂಪ್ರದಾಯಿಕವಾಗಿ ಮಾತನಾಡುತ್ತಾ ಇರತಕ್ಕ ಸಂದರ್ಭದಲ್ಲಿ ನನ್ನ ಅನಿಸಿಕೆಯನ್ನು ಸದನದ ಮುಂದೆ ಇಡುತ್ತಿದ್ದೇನೆ. ಪ್ರಜಾಪ್ರಭುತ್ವದ ದೊಡ್ಡ ಅಂಗವಾದ ಈ ಸದನಕ್ಕೆ ಏನಿದೆ ಇದರ ಅವಿಭಾಜ್ಯ ಅಂಗವಾಗಿ ನಾವಿದ್ದೇವೆ, ಇದಕ್ಕೆ ನಮ್ಮ ಕೊಡುಗೆಯನ್ನು ಪ್ರಾಮಾಣಿಕವಾಗಿ ಕೊಟ್ಟಿದ್ದೇವೆಂಬ ಆತ್ಮ ವಿಶ್ವಾಸದಿಂದ ಇಲ್ಲಿಂದ ನಾವೆಲ್ಲರೂ ತೆರಳೋಣ ಹಳೆಯ ಸಮಸ್ಯರ ನೆನಪು ಇರಬಹುದು ಅಥವಾ ಕೆಲವರನ್ನು ಮರೆಯಬಹುದು. ಆದರೆ ಕೆಲವರ ಮುಖ ಪರಿಚಯವನ್ನು ಮತ್ತು ಅವರ ಮಾತಿನ ಧಾಟಿಯನ್ನು ಮಾತ್ರ ಮರೆಯುವುದಕ್ಕೆ ಆಗುವುದಿಲ್ಲ. ನನ್ನದನ್ನು ಮತ್ತೊಬ್ಬರು, ತಮ್ಮದನ್ನು ನಾನು ನೆನಪಿಡಬಹುದು. ಆದೇ ರೀತಿ ಮಾನ್ಯ ಆತ್ಮಗೌರವರನ್ನು ಮಾತ್ರ ಮರೆಯುವುದಕ್ಕಾಗುವುದಿಲ್ಲ. ಬಿಳಿ ಗಡ್ಡದಾರಿ ಯಾದ ತಿವರು ಒಳ್ಳೆಯ ವೀವಿಯಿಂದ ನಿಲ್ಲತಕ್ಕ ವ್ಯಕ್ತಿತ್ವ ಅವರದ್ದು. ಮಾನ್ಯ ಗಟ್ಟಿ ಚಂದ್ರಶೇಖರ್‌ರವರದ್ದು ಮತ್ತೊಂದು ರೀತಿಯದು. ಮಾನ್ಯ ಆನಂದರಾಯರದ್ದು ಸೈಜಿನ ವಿಷಯ, ಮಾನ್ಯ ಗುಂಡೂರಾಯರು ಮತ್ತು ಮಾನ್ಯ ಆನಂದರಾಯರು ಒಂದೇ ಗುಂಪಿಗೆ ಒರುತ್ತಾರೆ. ಅದೇ ರೀತಿ, ಮಾನ್ಯ ಇಬ್ರಾಹಿಂರವರಿಗೂ ಕೂಡ ಆ

ಗೊಂಬಿನಲ್ಲಿ ಸೇರುತ್ತಾರೆ. ಒಂದು ವೇಳೆ ವ್ಯಕ್ತಿಗಳ ಹೆಸರುಗಳು ಮರೆತು ಹೋದರೂ ಅವರ ಪರಿಚಯ, ವ್ಯಕ್ತಿತ್ವ ಹಾಗೂ ಅವರ ಪಾತಯಗಳು ಎಂದೆಂದಿಗೂ ಮನಸ್ಸಿನಲ್ಲಿ ಉಳಿದಿರುತ್ತವೆ. ನಾನು ಮಂತ್ರಿಯಾಗಿದ್ದಾಗ ಮಾನ್ಯ ಅರುಣ್‌ಗಂರವರಿಗೆ, ನೀವು ಬೇಗನೆ ಕಂಟ್ರೋಲ್ ತಪ್ಪಿ ಹೋಗುತ್ತೀರಿ ಎಂದು ಹೇಳುತ್ತಿದ್ದೆ. ಆಗ ಅವರು ನಾನು ಬಹಳ ಪ್ರಯತ್ನ ಮಾಡುತ್ತೇನಾದರೂ ಒಮ್ಮೊಮ್ಮೆ ಕಂಟ್ರೋಲ್ ತಪ್ಪಿ ಹೋಗುತ್ತದೆಂಬ ಪಾತನ್ನು ಹೆಳುತ್ತಿದ್ದರು.

ಇವೆಲ್ಲಾ ಸವಿನೆನಪುಗಳು ನಮ್ಮ ಜೀವನದಲ್ಲಿ ಬರುತ್ತವೆ ಇನ್ನು ಕೆಲವರನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಮಾನ್ಯ ಗೂಳಪ್ಪ ಉಪನಾಳ್ ಅವರನ್ನು ಮರೆಯುವುದಕ್ಕಾಗುತ್ತದೆಯೆ? ಅವರು ಯಾವಾಗಲೂ ತಮ್ಮ ಪೇಟದೊಳಗೆ ಎಲೆ ಅಡಿಕೆಯನ್ನಿಟ್ಟುಕೊಂಡೇ ಸದನಕ್ಕೆ ಬರುತ್ತಿದ್ದರು. ಅವರನ್ನು ಮಾತನಾಡಿಸಿದರೆ ಅಡಿಕೆ ಕೊಟ್ಟು ಮುಂದಕ್ಕೆ ಹೋಗುತ್ತಿದ್ದರು. ನಾವು ಧರಣಿ ಸತ್ಯಾಗ್ರಹ ಮಾಡಿದಾಗ ಕೂಡ ನನಗೆ ಅಡಿಕೆ ಕೊಟ್ಟು ಹೊರಗೆ ಹೋದರು. ಸದನದ ಸದಸ್ಯರ ಜೀವನದಲ್ಲಿ ಇವೆಲ್ಲಾ ಸವಿನೆನಪುಗಳು. ನಾನು ಕೆಲವು ಕಾಲ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ ನನ್ನ ಕರ್ತವ್ಯವನ್ನು ಅರಿತು, ಕರ್ತವ್ಯದ ಚೌಕಟ್ಟಿನಲ್ಲಿ ಆ ಕೆಲಸವನ್ನು ಮಾಡಿದ್ದೇನೆ. ರಾಜಕೀಯದಲ್ಲಿ ಬದಲಾವಣೆಗಳು ಆಗುತ್ತಿರುತ್ತವೆ. ಅದರ ಬಗ್ಗೆ ವಿವರಗಳನ್ನು ಹೇಳಬೇಕಾಗಿಲ್ಲ. ನಾನು ಆ ಕಡೆ ಕುಳಿತೂ ಕೆಲಸ ಮಾಡಿದ್ದೇನೆ, ಈ ಕಡೆ ಕುಳಿತೂ ಕೆಲಸ ಮಾಡಿದ್ದೇನೆ. ಎರಡೂ ಕಡೆಯೂ ಸಂತೋಷವಾಗಿ ಕಾಲ ಕಳೆದಿದ್ದೇನೆ. ಅಧಿಕಾರ ಸಿಕ್ಕಿದಾಗ ಮಾತ್ರ ಸಂತೋಷ ಪಡಬೇಕೆಂದೇನೂ ಇಲ್ಲ. ಕರ್ತವ್ಯದಲ್ಲಿ ಆತ್ಮವಿಶ್ವಾಸ ನಮಗಿದ್ದರೆ ಸಂತೋಷಪಡಬಹುದು. ಆ ಕಡೆ ಕುಳಿತಿದ್ದಾಗ ಎಷ್ಟು ಸೌಮ್ಯವಾಗಿ ಕುಳಿತುಕೊಳ್ಳುತ್ತಿದ್ದೆನೋ ಅಷ್ಟೇ ಸೌಮ್ಯವಾಗಿ ಈ ಕಡೆ ಇದ್ದಾಗ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಕೂಗಾಡಬೇಕು, ಗಲಾಟೆ ಮಾಡಬೇಕು ಎಂಬುದಲ್ಲ. ಒಂದು ವಿಷಯ ಪ್ರತಿಪಾದನೆ ಮಾಡಬೇಕಾದರೆ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಮಾಡುವ ರೀತಿಯೇ ಬೇರೆ. ಆ ಕಡೆ ಇರುವವರಿಗೆ ಇದು ಗೊತ್ತಾಗುವುದಿಲ್ಲ. ಇಲ್ಲಿ ಕುಳಿತು ಆ ಕಡೆ ಹೋಗಿರುವವರಿಗೆ ಗೊತ್ತಾಗುತ್ತದೆ. "ಇದೇನು ಬಂಗಾರಪ್ಪನವರು (ಆಡಳಿತ ಪಕ್ಷದಲ್ಲಿ) ಇದ್ದಾಗ ಸುಮ್ಮನೆ ಕುಳಿತುಕೊಳ್ಳುತ್ತಿದ್ದರು, ಈ ಕಡೆ (ವಿರೋಧ ಪಕ್ಷಕ್ಕೆ) ಹೋದಮೇಲೆ ಇದೇಕೆ ಹೀಗೆ ಮಾಡುತ್ತಾರೆ" ಎಂದು ಕೆಲವರು ಕೇಳಿರುವುದುಂಟು. ವಿರೋಧಪಕ್ಷದಲ್ಲಿ ಕರ್ತವ್ಯವನ್ನು ನಿರ್ವಹಿಸುವ ಧಾಟಿ, ರೀತಿನೀತಿ ಬೇರೆ ಇರುತ್ತದೆ ಎಂಬುದನ್ನು ಮೂಲಭೂತವಾಗಿ ಸ್ವಲ್ಪ ಅರ್ಥ ಮಾಡಿಕೊಂಡರೆ ಅದು ಗೊತ್ತಾಗುತ್ತದೆ. ಬೇರೇನೂ ಇಲ್ಲ. ಸಾಮಾನ್ಯವಾಗಿ ಮಾನ್ಯ ಪಿ ವೆಂಕಟರಮಣ ಅವರ ನೆನಪು ಈ ಸಂದರ್ಭದಲ್ಲಿ ಬರುತ್ತದೆ. ೧೯೬೦ನೇ ಇಸವಿಯಲ್ಲಿ ನಾನು ಮಂತ್ರಿಯಾಗಿದ್ದಾಗ ಅವರು ಅಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ವಿರೋಧಪಕ್ಷದವರೆಲ್ಲಾ ಘೇರಾವೂ ಮಾಡುವುದಕ್ಕೆ ಅಧ್ಯಕ್ಷ ಪೀಠದ ಹತ್ತಿರ ಹೋದರು. ಆಗ ಅವರು ಎದ್ದುನಿಂತುಕೊಂಡು "ನೋಡಿ ನೋಡಿ, ಮೈ ಹತ್ತಿರ ಬರುತ್ತಿದ್ದೀರಿ, ಇದು ಒಳ್ಳೆಯದಲ್ಲ. ಇದು ಸರಿಯಲ್ಲ" ಎಂದು ಹೇಳಿದ್ದು ನನಗಿನ್ನೂ ನೆನಪಿದೆ. ಅದೇನೇ ಇರಲಿ, ಅವರು ಕರ್ತವ್ಯ ನಿರ್ವಹಣೆ ಮಾಡುವಾಗ ದಿಟ್ಟತನದಿಂದ ಚೆನ್ನಾಗಿ ಮಾಡಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಮಾನ್ಯ ಅಧ್ಯಕ್ಷರಾದ ತಾವು ಅಧ್ಯಕ್ಷರಾದ ಮೇಲೆ ಕಾನೂನಿನ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಯಾರಿಗೂ ಕಡಿಮೆ ಇಲ್ಲದಂತೆ ಕರ್ತವ್ಯ ನಿರ್ವಹಣೆ ಮಾಡಿದ್ದೀರಿ. ತಮ್ಮ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ತಾವು ಅಧ್ಯಕ್ಷರಾಗಿ ಮುಂದುವರಿಯುತ್ತೀರಿ. ಚುನಾವಣೆ ನಂತರ ಬೇರೆಯವರು ಬರುವವರೆಗೆ ತಾವಿರುತ್ತೀರಿ. ಅದೇನೇ ಇರಲಿ, ತಮ್ಮ ಬಗ್ಗೆ ಅಪಾರವಾದ ಗೌರವವನ್ನು ಈ ಸದನವಲ್ಲರತಕ್ಕವರೆಲ್ಲಾ ಇಟ್ಟುಕೊಂಡಿದ್ದೇವೆ. ಅದರಲ್ಲಿ ಅನುಮಾನ ಬೇಕಾಗಿಲ್ಲ. ಅನೇಕ ಮಾನ್ಯ ಮಂತ್ರಿಗಳಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಮಾನ್ಯ ಧರ್ಮಸಿಂಗ್ ಅವರಿಲ್ಲಿದ್ದಾರೆ. ಅವರೂ ತುಂಬಾ ಒಳ್ಳೆಯ ವ್ಯಕ್ತಿ. ಮಾನ್ಯ ಇಬ್ರಾಹಿಂ ಅವರು ಇದ್ದಾರೆ ಅವರಿಬ್ಬರೂ ಒಂದೇ ಸೈಜಿನವರು. ಅನೇಕ ನನ್ನ ಮಾನ್ಯ ಮಿತ್ರರು ಮಂತ್ರಿಗಳಾಗಿ ಅಧಿಕಾರದಲ್ಲಿದ್ದಾರೆ ಅಧಿಕಾರದಲ್ಲಿರಲಿ, ಸಂತೋಷ. ಆದರೆ ಕರ್ತವ್ಯ ನಿರ್ವಹಣೆ ಮಾಡಬೇಕಾದ ವಿಚಾರದಲ್ಲಿ ಮಾತ್ರ ಎಚ್ಚರ, ಚಚ್ಚರ. ಇವೆಲ್ಲಾ ತಮಗೆ ಗೊತ್ತಿಲ್ಲ ಎಂಬ ದೃಷ್ಟಿಯಿಂದ ಹೇಳುತ್ತಿಲ್ಲ. ಅತೀ ಕಿರಿಯ ವಯಸ್ಸಿನ ಮಂತ್ರಿಗಳಲ್ಲಿ ಮಾನ್ಯ ಚಿಮ್ಮನಕಟ್ಟಿಯವರಿದ್ದಾರೆ. ಅವರು ಮಂತ್ರಿಯಾದ ಮೇಲೆ ಚಿಕ್ಕವಯಸ್ಸಿನಲ್ಲಿ ಮಂತ್ರಿಗಳಾಗಿದ್ದೀರಿ, ಚೆನ್ನಾಗಿ ಕೆಲಸ ಮಾಡಿ, ವ್ಯಕ್ತಿತ್ವವನ್ನು ಚೆನ್ನಾಗಿ ಬೆಳೆಸಿಕೊಳ್ಳಿ ಎಂಬ ಸದಭಿಪ್ರಾಯವನ್ನು ವ್ಯಕ್ತಮಾಡಿದ್ದೆ. ಆದೇರೀತಿ ಅನೇಕ ಯುವಕರು ಮಂತ್ರಿಗಳಾಗಿದ್ದಾರೆ. ಅವರೆಲ್ಲಾ ಮೇಲೆ ಬರುವುದಕ್ಕೆ ಅವಕಾಶವಿದೆ. ಈ ಕಡೆ ಮಾನ್ಯ ಜೀವರಾಜ ಆಳ್ವ ಅವರಿದ್ದಾರೆ. ಇವರೂ ಯುವಕರು. ಪುನಃ ಆರಿಸಿ ಬರಲಿ. ಅಂದರೆ ವಯಸ್ಸಾದವರು ಬರಬಾರದು ಎಂದಲ್ಲ. ಯುವಕರು ಆರಿಸಿಬರುವುದು ಒಳ್ಳೆಯದು, ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ವಿಧಾನ

ಸಭೆಗೆ ಪ್ರವೇಶ ಮಾಡುವುದು ಒಳ್ಳೆಯದು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾವು ಆ ಕಡೆ ಈ ಕಡೆ ಕೆಲಸ ಮಾಡುವಾಗ ಕೆಲವು ಮಾತುಗಳನ್ನಾಡಿರಬಹುದು. ದಯವಿಟ್ಟು ಏನೇ ಮನಸ್ಸಿನಲ್ಲಿದ್ದರೂ ಮರೆತ ಬಿಡಿ. ಮಾನ್ಯ ತಕ್ಕೇದ್ ಅವರು ನಿನ್ನೆ ಪೇಟ ಸುತ್ತಿಕೊಂಡು ಬಂದಿದ್ದರು. ಅವರೂ ಒಳ್ಳೆಯ ಮಾತುಗಾರರು. ನಾವೆದ್ದ ತಕ್ಷಣ ಖಾಯಂ ಆಗಿ ಏಳುತ್ತಿದ್ದ ಅನೇಕ ಸದಸ್ಯರು ಇಲ್ಲಿದ್ದಾರೆ. ಮಾನ್ಯ ಪರಪ್ಪ ಕಳ್ಳೀಗುಡ್ಡ ಅವರೂ. ಮಾನ್ಯ ವೀರಣ್ಣ ಮತ್ತೀಕಟ್ಟಿ ಅವರು, ಮಾನ್ಯ ಭಾಸ್ಕರನಾಯಿಡು ಅವರು– ಇವರೆಲ್ಲಾ ಇದ್ದಾರೆ. ಮೊನ್ನೆ ಮಾನ್ಯ ಭಾಸ್ಕರನಾಯಿಡು ಅವರೂ ನನ್ನ ಮೈಮೇಲೆ ಬೀಳುವುದಕ್ಕೆ ಬಂದಿದ್ದರು. ಇದೆಲ್ಲಾ ಸದನದಲ್ಲಿ ನಡೆಯುತ್ತಿರುತ್ತದೆ. ಇದನ್ನೆಲ್ಲಾ ನಾವು ಮರೆಯುವುದಕ್ಕಾಗುವುದಿಲ್ಲ. ಇನ್ನು ಮಹಿಳಾ ಸದಸ್ಯರ ಬಗ್ಗೆ ಹೇಳುವುದಾದರೆ, ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಅವರಿದ್ದಾರೆ ಇವರು ಮಂತ್ರಿಗಳಾದ ಮೇಲೆ ಪ್ರತಿಯೊಂದು ವ್ಯವಹಾರಗಳೂ ಕನ್ನಡದಲ್ಲೇ ಆಗಬೇಕು ಎಂಬ ಆದೇಶವನ್ನು ಕೊಟ್ಟಿದ್ದಾರೆಂಬ ವಿಷಯವನ್ನು ಪತ್ರಿಕೆಯಲ್ಲಿ ನೋಡಿದೆ. ಇಂಗ್ಲೀಷ್ ಸ್ಕೂಲ್‌ಗಳನ್ನು ಸ್ಯಾಂಕ್ಷನ್ ಮಾಡುವುದಿಲ್ಲ, ಕನ್ನಡ ಸ್ಕೂಲೇ ಸರಿ ಎಂಬ ತೀರ್ಮಾನವನ್ನೂ ಅವರು ಕೈಗೊಂಡಿದ್ದಾರೆ. ನಿಜವಾಗಿಯೂ ಇಂಥ ತೀರ್ಮಾನಗಳನ್ನು ಕಮಿಟೆಡ್ ಪರ್ಸನ್ಸ್ ಮಾತ್ರ ತೆಗೆದುಕೊಳ್ಳುವುದಕ್ಕೆ ಸಾಧ್ಯ. ಮಾನ್ಯ ಅಬ್ದುಲ್‌ಸಮದ್ ಅವರನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಏಕೆಂದರೆ ಅವರು ಜೋರಾಗಿ ಮಾತನಾಡಿದ್ದನ್ನು ಯಾರಾದರೂ ಕೇಳಿದ್ದೀರಾ? ಯಾವತ್ತೂ ಅವರು ಜೋರಾಗಿ ಮಾತನಾಡುವುದಿಲ್ಲ. ಎಂದಾದರೂ ಅವರು ಮಾತನಾಡಿದರೆ ಅವತ್ತು ಸೂರ್ಯ ಪಶ್ಚಿಮ ದಿಕ್ಕಿನಲ್ಲಿ ಹುಟ್ಟಿರುತ್ತಾನೆ. ಅಷ್ಟು ಸೌಮ್ಯ ಸ್ವಭಾವದ ವ್ಯಕ್ತಿ ಅವರು. ಎಲ್ಲರ ಗುಣಗಾನವನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕೊನೆಯದಾಗಿ, ಚುನಾವಣೆ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ವಿಶ್ವ ಕನ್ನಡ ಸಮ್ಮೇಳನ ಆದಮೇಲೆ ಚುನಾವಣೆ ನಡೆಯುತ್ತದೆಂಬ ಮಾತನ್ನು ಹೇಳಿದ್ದರು. ಆದರೆ ಜನವರಿ ೫ನೇ ತಾರೀಖು ಚುನಾವಣೆ ದಿನಾಂಕ ನಿಗದಿಯಾಯಿತು. ಸಂತೋಷ; ಚುನಾವಣೆ ಯಾವಾಗಲಾದರೂ ನಡೆಯಬೇಕಾಗಿತ್ತು ನಡೆಯುತ್ತಿದೆ ಒಂದು ಮಾತನ್ನು ಮಾತ್ರ ಆ ಕಡೆ ಹಿಂದೆ ಕುಳಿತಿರತಕ್ಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಸುಮ್ಮನೆ ಇದನ್ನು ಗಮನದಲ್ಲಿಟ್ಟುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಬೆಳಿಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಮಾರಂಭಕ್ಕೆ ಹೋಗಿದ್ದರು. ಆ ಸಮಾರಂಭದಲ್ಲಿ ಮಾತನಾಡುವಾಗ ಚುನಾವಣೆ ಬರುವುದು ಫೆಬ್ರುವರಿ ತಿಂಗಳಲ್ಲೇ ಎಂದು ಹೇಳಿದ್ದಾರೆ. ಅದು ನಾಳೆ ಪತ್ರಿಕೆಯಲ್ಲಿ ಬರುತ್ತದೆ. ಆದರೆ ಮಧ್ಯಾಹ್ನ ೧೨ ಗಂಟೆಯ ಹೊತ್ತಿನಲ್ಲಿ ಜನವರಿ ೫ನೇ ತಾರೀಖು ಚುನಾವಣೆ ಎಂದೂ ಗೊತ್ತಾಯಿತು. ನಮಗೂ ಆಗ ಫೋನ್ ಮೆಸೇಜ್ ಬಂತು, ಪತ್ರಿಕೆಯವರೂ ಫೋನ್ ಮಾಡಿ ತಿಳಿಸಿದರು. ಬೆಳಿಗ್ಗೆ ಬಿ ಡಿ.ಎ. ಸಮಾರಂಭದಲ್ಲಿ ಫೆಬ್ರುವರಿಯಲ್ಲೇ ಚುನಾವಣೆ ಬರುವುದು ಎಂದೂ ಮುಖ್ಯಮಂತ್ರಿಗಳು ಹೇಳಿರಬೇಕಾದರೆ ಅವರಿಗೆ ಈ ವಿಷಯ ಗೊತ್ತಿರಲಿಲ್ಲ ಎಂದಾಯಿತು. ಅಂದರೆ ಮುಖ್ಯಮಂತ್ರಿಗಳಿಗೂ ಗೊತ್ತಿಲ್ಲದೇ ಡಲ್ಲಿಯಲ್ಲಿ ಈ ವಿಚಾರ ತೀರ್ಮಾನವಾಯಿತು ಎಂಬುದನ್ನು ಹೇಳುತ್ತಿದ್ದೇನೆ. ಇದನ್ನು ನಾನು ಬೇರೆ ಯಾವ ಅರ್ಥದಲ್ಲೂ ಹೇಳುತ್ತಿಲ್ಲ. ಇದು ತಮಗೆ ತಿಳಿದಿರಲಿ ಎಂದು ಹೇಳುತ್ತಿದ್ದೇನೆ. ಮುಖ್ಯಮಂತ್ರಿ ಗುಂಡೂರಾಯರನ್ನು ಕೇಳಿಯೇ ಚುನಾವಣಾ ದಿನಾಂಕವನ್ನು ಗೊತ್ತು ಮಾಡುತ್ತಾರೆ ಎಂಬ ಭಾವನೆ ಆ ಕಡೆ ಸದಸ್ಯರಲ್ಲಿತ್ತು. ಅದು ತಪ್ಪು ಎಂಬುದು ಈ ದಿವಸ ಮುಖ್ಯಮಂತ್ರಿಗಳು ಮಾಡಿರತಕ್ಕ ಭಾಷಣದಿಂದ ಮತ್ತು ಚುನಾವಣಾ ದಿನಾಂಕದ ನಿರ್ಧಾರದಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದ್ದರಿಂದ ಆ ಕಡೆಯ ಮಾನ್ಯ ಸದಸ್ಯರು ತಮ್ಮ ಮುಂದಿನ ಹಿತದೃಷ್ಟಿಯಿಂದ ಸ್ವಲ್ಪ ಎಚ್ಚರಿಕೆಯಿಂದಿದ್ದರೆ ಒಳ್ಳೆಯದು ಎಂದು ಹೇಳಿದೆ, ಅಷ್ಟೆ. ಅರ್ಥ ಆಯಿತಲ್ಲಾ ಎಲ್ಲರಿಗೂ?

ಶ್ರೀ ಡಿ.ಟಿ. ರಾಮು.— ಉಪಾಧ್ಯಾಯರ ಕೆಲಸ ಮಾಡುತ್ತಿದ್ದೀರಾ?

ಶ್ರೀ ಶೇರ್‌ಖಾನ್.— ಒಂದು ಕೊಡ ಹಾಲಿಟ್ಟು ಸ್ವಲ್ಪ ಹುಳಿ ಏತಕ್ಕೆ ಹಾಕಿದ್ದೀರಿ?

ಶ್ರೀ ಡಿ.ಟಿ. ರಾಮು.— ಪಾಠ ಸಾಕು.

ಶ್ರೀ ಎಸ್. ಬಂಗಾರಪ್ಪ.— ಇದು ಹುಳಿ ಅಲ್ಲ. ಸುಮ್ಮನೆ ನಿಮ್ಮ ಗಮನಕ್ಕೆ ತಂದೆ ಸುಮ್ಮನೆ ನಗುವುದಕ್ಕಾಗಿ ಹೇಳಿದೆ. ಈ ಮಾತು ಈ ಕಡೆಯ (ವಿರೋಧಪಕ್ಷದ) ಸದಸ್ಯರಿಗೆ ಅನ್ವಯವಾಗುವುದಿಲ್ಲ. ಆ ಕಡೆ ಸದಸ್ಯರಿಗೆ ಮಾತ್ರ ಕಿವಿಮಾತನ್ನು ಈ ಮೈಕ್ ಮೂಲಕ ಹೇಳಿದ್ದೇನೆ, ಇಷ್ಟು ಸಾಕು. ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ ವಿಧಾನಮಂಡಲದ ಕಾರ್ಯಾಲಯದವರೆಲ್ಲರೂ

ರಿಪೋರ್ಟರ್ಸ್ ಆದಿಯಾಗಿ ಒಳ್ಳೆಯ ಸಹಕಾರ ಕೊಟ್ಟಿದ್ದಾರೆ. ಅವರವರ ಕರ್ತವ್ಯವನ್ನು ಚೆನ್ನಾಗಿ ಮಾಡಿದ್ದಾರೆ. ನಾವೆಲ್ಲರೂ ಸಂತಸದಿಂದ ಕರ್ತವ್ಯಪಾಲನೆ ಮಾಡಿ ತೆರಳುತ್ತಿದ್ದೇವೆ ಎಂಬ ಆತ್ಮವಿಶ್ವಾಸದಿಂದ ಹೋಗೋಣ. ಮುಂದೆ ಚುನಾವಣೆ ಆದ ಮೇಲೆ ಯಾರು ಯಾರು ಎಲ್ಲೆಲ್ಲಿರುತ್ತಾರೋ ವಿಚಾರ ಮಾಡೋಣ. ಜನ ನಮ್ಮನ್ನು ಅಲ್ಲಿ ಕುಳಿತುಕೊಳ್ಳಬೇಕು ಎಂದರೆ ಅಲ್ಲಿ ಕುಳಿತುಕೊಳ್ಳೋಣ. ಇಲ್ಲವೇ ಇಲ್ಲಿ ಕುಳಿತುಕೊಳ್ಳಬೇಕು ಎಂದರೆ ಇಲ್ಲಿ ಕುಳಿತುಕೊಳ್ಳೋಣ. ಈ ವಯಸ್ಸಿನಲ್ಲಿ ಅಲ್ಲಿದ್ದು ಇಲ್ಲಿಯದನ್ನು ನೋಡಿದ್ದೀರಿ, ಇಲ್ಲಿದ್ದು ಅಲ್ಲಿಯದನ್ನು ನೋಡಿದ್ದೀರಿ. ಯಾರಯಾರ ಜಾಗ ಯಾವ ರೀತಿಯಲ್ಲಿ ಬದಲಾವಣೆಯಾಗುತ್ತದೆ ಎನ್ನುವುದು ಪ್ರಜಾತ್ರಭುತ್ವದಲ್ಲಿ ಜನತೆಯ ಕೈಯಲ್ಲಿದೆ. ಅವರ ತೀರ್ಪಿಗೆ ನಾವು ತಲೆಬಾಗೋಣ. ಅದು ಪ್ರಜಾಪ್ರಭುತ್ವದ ಲಕ್ಷಣ ಎಂದು ಹೇಳಿ, ಎರಡು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ಎಲ್ಲ ಸದಸ್ಯರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ.

†ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಸನ್ಮಾನ್ಯ ಅಧ್ಯಕ್ಷರೇ, ಆರನೇ ಶಾಸನಸಭೆಯ ಮುಕ್ತಾಯ ಘಟ್ಟದಲ್ಲಿ ನಾವಿದ್ದೇವೆ. ಕಳೆದ ೫ ವರ್ಷಗಳಿಂದ ನಾವೆಲ್ಲರೂ ಒಂದೇ ಕಡೆ ಇದ್ದು ಕೆಲವು ಸಮಯದಲ್ಲಿ ರಸನಿಮಿಷಗಳನ್ನು ಅನುಭವಿಸಿದ್ದೇವೆ. ಕೆಲವು ಸಮಯದಲ್ಲಿ ಕಹಿವಾತಾವರಣವನ್ನೂ ಅನುಭವಿಸಿದ್ದೇವೆ. ಆದಾಗ್ಯೂ ಕೂಡ ಈ ಸದನದ ಗೌರವವನ್ನು ಪ್ರತಿಷ್ಠೆಯನ್ನು ಸಂರಕ್ಷಣೆ ಮಾಡುವುದರಲ್ಲಿ ಎಲ್ಲಾ ಸದಸ್ಯರೂ ಸಹಕಾರಿಗಳಾಗಿದ್ದಾರೆ ಎನ್ನುವ ಭಾವನೆ ಇಟ್ಟುಕೊಂಡು ನಾನು ಪ್ರಥಮ ಬಾರಿಗೆ ಈ ಶಾಸನಸಭೆಯನ್ನು ಪ್ರವೇಶ ಮಾಡಿದರೂ ನಮ್ಮ ಹಿರಿಯ ನಾಯಕರ ಸಹಕಾರದಿಂದ, ಮಾರ್ಗದರ್ಶನದಿಂದ, ಹಿರಿಯ ನಾಯಕರ ಮಾರ್ಗದರ್ಶನದ ಫಲವಾಗಿ ನಾನೂ ಕೂಡಾ ಸದಸ್ಯನಾಗಿ ಕರ್ತವ್ಯ ನಿರ್ವಹಣೆ ಮಾಡುವುದರಲ್ಲಿ ಸಾಕಷ್ಟು ಮಟ್ಟಿಗೆ ನನಗೆ ಮನಸ್ಸು ಒಪ್ಪುವ ರೀತಿಯಲ್ಲಿ ಮಾಡಿದ್ದೇನೆ ಎನ್ನುವ ಆತ್ಮವಿಶ್ವಾಸ ನನಗಿದೆ. ಕಳೆದ ಎರಡೂವರೆ ವರ್ಷದಿಂದ ನಮ್ಮದೇ ಆದ ಭಾರತೀಯ ಜನತಾ ಪಕ್ಷದ ಮುಖಂಡನಾಗಿ, ನನ್ನ ಹಿರಿಯ ಸದಸ್ಯರ ಸಹಕಾರದೊಡನೆ ಈ ದೇಶದ ಜನರ ಸಮಸ್ಯೆಗಳನ್ನು ಬಗೆಹರಿಸುವ ರೀತಿನೀತಿಗಳನ್ನು ಸರ್ಕಾರದ ಮುಂದೆ ಇಡುವುದರಲ್ಲಿ, ನಮ್ಮ ರೀತಿನೀತಿಗಳನ್ನು ಅನುಸರಿಸಿ ಸಾಕಷ್ಟು ಪ್ರಯತ್ನ ಮಾಡಿ ಸರ್ಕಾರದ ಮನವೊಲಿಸುವ ಪ್ರಯತ್ನವನ್ನು ನಾನು ಮಾಡಿದ್ದೇನೆ. ಅದು ಆ ಪಕ್ಷಕ್ಕೆ ಸಂದಂತಹ ಗೌರವವೆಂದು ನಾನು ಭಾವಿಸಿದ್ದೇನೆ. ನಾವು ಈ ಕಡೆ ಇದ್ದರೂ ವಿರೋಧ ಪಕ್ಷ ಎನ್ನುವ ಭಾವನೆಯನ್ನು ನಾವೇನು ಇಟ್ಟುಕೊಂಡಿದ್ದೇವೆ. ಬಹುಶಃ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷ ಎನ್ನುವ ಸಿದ್ಧಾಂತ ಏನಿದೆ ಆ ಬಗ್ಗೆ ನನ್ನ ವಿಚಾರದಲ್ಲಿ ಬದಲಾವಣೆ ಮಾಡಿಕೊಂಡಿದ್ದೇನೆ. ವಿರೋಧ ಪಕ್ಷ ಎನ್ನುವ ಬದಲು ನಾವು ಪ್ರತಿಪಕ್ಷ ಎನ್ನತಕ್ಕಂತಹ ಭಾವನೆಯಿಂದ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಏಕೆಂದರೆ, ಸರ್ಕಾರ ಮಾಡಿದೆಲ್ಲವನ್ನೂ ವಿರೋಧ ಮಾಡುವುದು ವಿರೋಧ ಪಕ್ಷದ ಕೆಲಸ ಎನ್ನುವ ಭಾವನೆ ಜನಮಾನದಲ್ಲಿ ಮೂಡಬಾರದು. ಸರಕಾರ ಮಾಡತಕ್ಕ ತಪ್ಪನ್ನು ತೋರಿಸಿ ಸರಿಯಾದ ಮಾರ್ಗದಲ್ಲಿ ನಡೆಸುವಂತಹ ಕೆಲಸ ಮಾಡಬೇಕೆನ್ನುವುದು ಪ್ರತಿಪಕ್ಷದ ಕೆಲಸವೆಂದು ತಿಳಿದುಕೊಂಡು, ಪ್ರತಿಪಕ್ಷವಾಗಿ ನಾವು ಕೆಲಸ ಮಾಡಿದ್ದೇವೆನ್ನುವ ಆತ್ಮವಿಶ್ವಾಸ ನನಗಿದೆ. ಹೀಗೆ ಹೇಳುವಾಗ ನಮಗೂ ಸರ್ಕಾರಕ್ಕೂ ತೀವ್ರವಾದ ವಾಗ್ಯುದ್ಧ ನಡೆದಂತಹ ಪ್ರಸಂಗಗಳಿರಬಹುದು, ಕೆಲವು ವೇಳೆ ಕಹಿ ಪ್ರಸಂಗಗಳು ಸಂಘಟಿಸಿರಬಹುದು ಆದರೆ ನಾವು ಜೋರಾಗಿ ಹೇಳುವುದಾಗಲೀ, ಸರ್ಕಾರ ತೀವ್ರವಾಗಿ ಉತ್ತರ ಕೊಡುವುದಾಗಲಿ. ಆಗಿರುವುದರಲ್ಲಿ ನಮ್ಮೆಲ್ಲರ ಗುರಿ ಮಾತ್ರ ಒಂದೇ ಆ ಒಂದು ಗುರೀ ಎಂದರೆ, ನಾವು ಇಲ್ಲಿ ಕುಳಿತುಕೊಳ್ಳುವಂಥ ಭಾಗ್ಯವನ್ನು ಕಲ್ಪಿಸಿಕೊಟ್ಟಂತಹ ಮಹಾ ಜನತೆ ಏನಿದೆ, ಹಸಿದ ಹೊಟ್ಟೆಯಲ್ಲಿರತಕ್ಕ ಜನತೆ ಏನಿದೆ ಅವನುಟ್ಟ ಚಿಂದಿ ಬಟ್ಟೆ ಏನಿದೆ ಅದನ್ನು ಪರಿಹಾರ ಮಾಡತಕ್ಕ ಒಂದು ಮಾರ್ಗದಲ್ಲಿ ನಾವೆಲ್ಲರೂ ಕೂಡಾ ಸರ್ಕಾರದ ಟ್ರಸ್ಟ್ ರೀತಿಯಲ್ಲಿ ಕೆಲಸ ಮಾಡತಕ್ಕುದ್ದು ನಮ್ಮ ಹೊಣೆ ಎನ್ನತಕ್ಕಂತ ಭಾವನೆಯನ್ನು ಇಟ್ಟುಕೊಂಡು ನಮ್ಮ ವಿಚಾರಧಾರೆಯನ್ನು ಸರ್ಕಾರದ ಮುಂದೆ ಇಡುವುದಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಈ ಸದನದ ಬಗ್ಗೆ ಜನತೆಯಲ್ಲಿ ಪೂರ್ಣವಾದ ವಿಶ್ವಾಸವಿದೆ. ವ್ಯಕ್ತಿ ಬದಲಾವಣೆಯಾಗಬಹುದು. ಆದರೆ ಸದನದ ಬಗ್ಗೆ ಮಾತ್ರ ಜನತೆ ಘನತೆ ಗೌರವವನ್ನು ಇಟ್ಟುಕೊಂಡಿದೆ. ಅದನ್ನು ರಕ್ಷಣೆ ಮಾಡಿಕೊಂಡು ಬರುವುದು ನಮ್ಮ ಜವಾಬ್ದಾರಿ ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿ, ವಿರೋಧ ಪಕ್ಷದಲ್ಲಿನ ಸದಸ್ಯರು ಜನರ ಸಮಸ್ಯಗಳನ್ನು ಸರ್ಕಾರದ ಮುಂದಿಡುವ ಪ್ರಯತ್ನ ಮಾಡಿದ್ದಾರೆಂದು ಹೇಳುತ್ತೇನೆ. ರಾಜಕಾರಣದಲ್ಲಿ ಬಹು ಮಟ್ಟಿಗೆ ವ್ಯಕ್ತಿ ನಿಷ್ಠೆ ರಾಜಕಾರಣ ಬೆಳೆಯುತ್ತಾ ಇರುವುದು ದೇಶದ ಕ್ಷೇಮಚಿಂತನೆಗೆ ಕುಂದಾಗಬಹುದೇನೋ ಎನ್ನುವ ರೀತಿಯಲ್ಲಿ

ಯೋಚನೆ ಮಾಡಿದವನು ನಾನು. ವ್ಯಕ್ತಿ ನಿಷ್ಠರಾಗದೆ ತತ್ವನಿಷ್ಠರಾಗಿ ನಾವು ರಾಜಕಾರಣ ಮಾಡಿದರೆ. ಆ ದಿಕ್ಕಿನಲ್ಲಿ ನಾವು ವಿಚಾರ ಮಾಡಿದರೆ ರಾಷ್ಟ್ರದ, ರಾಜ್ಯದ ಕಲ್ಯಾಣ ಮಾಡುವುದಕ್ಕೆ ಪ್ರತಿಯೊಬ್ಬ ರಾಜಕಾರಣಿಗೂ ಸಾಧ್ಯವಾಗುತ್ತದೆ. ಇವತ್ತು ಜನ ನಮ್ಮನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದಾರೆಂದರೆ, ಶಾಸಕನಾದವನು ರಾಜಕಾರಣಿ. ಶಾಸನಸಭೆಗೆ ಹೋಗಿ ಹೊರ ಬಂದಂ ಹೊರಗೆ ಇರುವವನು ರಾಜಕಾರಣಿಯಲ್ಲ, ಅವನು ಪ್ರೇಕ್ಷಕ ಎನ್ನುವ ಭಾವನೆ ಇದೆ. ಅದು ತಪ್ಪಾದ ಭಾವನೆ. ಯಾರು ಈ ದೇಶದಲ್ಲಿ ಸಾರ್ವಜನಿಕರ ಕ್ಷೇಮ ಚಿಂತನೆ ಮಾಡುವ ವ್ಯಕ್ತಿ ಇದ್ದಾನೋ ಅವನು ಪತ್ರಿಕೋದ್ಯಮಿಯಾಗಿರಬಹುದು, ಶಾಸಕನಾಗಿರಬಹುದು, ಸಾರ್ವಜನಿಕ ಕ್ಷೇತ್ರದಲ್ಲಿರಬಹುದು, ಅವರೆಲ್ಲರೂ ರಾಜಕಾರಣಗಳೇ. ಇವತ್ತು ರಾಜಕಾರಣದಲ್ಲಿ ತತ್ವನಿಷ್ಠೆ ಬೇಳೆಸುವುದಕ್ಕೆ ನಾವು ಪ್ರಯತ್ನ ಮಾಡತಕ್ಕ ಹೊಣೆಗಾರಿಕೆಯನ್ನು ಶಾಸಕನನ್ನಾಗಿ ನಮ್ಮನ್ನು ಆರಿಸಿರತಕ್ಕ ಮಹಾ ಜನತೆ ನಮಗೆ ಕೊಟ್ಟಿದೆ ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು, ನನ್ನ ಎಲ್ಲಾ ವಿಚಾರಧಾರೆಯಲ್ಲೂ ಕೂಡ ತತ್ವ ನಿಷ್ಠ ರಾಜಕಾರಣವನ್ನು ನಾನು ಪ್ರತಿಬಿಂಬಿಸುವುದಕ್ಕೆ, ಪ್ರತಿಧ್ವನಿಸುವಂತಹ ಪ್ರಯತ್ನವನ್ನು ನಾನು ಮಾಡಿದ್ದೇನೆ. ಈ ದಿಕ್ಕಿನಲ್ಲಿ ಕೆಲವು ಸಾರಿ ಕೆಲವರ ಮನಸ್ಸಿಗೆ ನೋವಾಗುವಂತೆ ಮಾತಾಡಿರಲಿಕ್ಕೆ ಸಾಕು. ಆದರೆ ನನಗೆ ಇರತಕ್ಕ ತತ್ವದ ದೃಷ್ಟಿಯಿಂದ, ಒಬ್ಬ ಮಹಾನೆ ವ್ಯಕ್ತಿಯ ಮಾತನ್ನು ಜೀವನದಲ್ಲಿ ಪ್ರತಿ ನಿಮಿಷ ಸ್ಮರಿಸಿಕೊಂಡು ಬಂದಿದ್ದೇನೆ. ಬಸವಣ್ಣನವರು ''ತನ್ನ ಬಣ್ಣಿಸಬೇಡ, ಇತರ ಹಳಿಯಲು ಬೇಡ'' ಎಂದಿರು ಮಾತು ನನ್ನ ಹೃದಯದಲ್ಲಿ ಯಾವಾಗಲೂ ನಾಟಿರತಕ್ಕಂತಹದ್ದು. ನಾನು ಕಠಿಣವಾದ ಮಾತು ಹೇಳುವ ಪ್ರಸಂಗ ಬರಿದಾಗಲೂ ಕೂಡ ಈ ಮಾತು ನನಗೆ ಬಾರಿಬಾರಿ ನೆನಪಾಗುತ್ತಿತ್ತು. ಆದರೆ ನನ್ನ ಅನುಭವಕ್ಕೆ ಬಂಗಿದೆ. ಏನೆಂದರೆ ನಾವು ಆಡುವ ಮಾತು, ಎಷ್ಟೇ ಕಠಿಣವಾಗಿ ಟೀಕೆ ಮಾಡುವುದಾದರೂ ಕೂಡಾ ಸಾವು ಬಳಸುವ ಭಾಷೆಯನ್ನು ಸರ್ಕಾರದ ಹೃದಯ ಮುಟ್ಟುವಂತೆ ಹೇಳಿದರೆ ಯಾವ ವಿರೋಧವೂ, ಕಹಿ ಪ್ರಸಂಗವೂ ಸದನದಲ್ಲಿ ಉಂಟಾಗುವುದಕ್ಕೆ ಸಾಧ್ಯವಿಲ್ಲ. ಆದರೆ ಬಳಸುವ ಭಾಷೆ ಮೆದುಳು ಮುಟ್ಟುವಂತೆ ಇದ್ದರೆ ಆಗ ಯಾರಿಗಾದರೂ ಕೂಡಾ ಒಂದು ಪ್ರತಿಭಟನೆ ಮಾಡುವ ಭಾವನೆ ಬರತಕ್ಕದ್ದು ಉಂಟು. ಆದರೆ ಶಾಸಕರಾಗಿ ರಾಜಕಾರಣಿಗಳಾಗಿ, ರಾಜ್ಯದ ಹಿತಚಿಂತಕರಾಗಿ ನಾವು ಮಾಡತಕ್ಕ ಕೆಲಸದಲ್ಲಿ, ನಾವು ಮಾಡತಕ್ಕ ಕೆಲಸದಲ್ಲಿ, ನಾವು ಬಳಸುವ ಭಾಷೆಯಲ್ಲಿ, ಹೃದಯ ಮುಟ್ಟುವ ರೀತಿಯಲ್ಲಿ ಎಷ್ಟೇ ಕಠಿಣವಾಗಿ ಮಾತನಾಡಿದರೂ ಕೂಡಾ ಯಾರ ಮನಸ್ಸಿನಲ್ಲೂ, ಯಾರ ಮೇಲೂ ಕೂಡ್ಲಾ ದುರ್ಭಾವನೆ ಬರುವುದಕ್ಕೆ ಸಾಧ್ಯವಿಲ್ಲ. ನಮಗೆ ವ್ಯಕ್ತಿಗಳ ಬಗ್ಗೆ ದುರ್ಭಾವನೆ, ಅಗೌರವ ಸೂಚಿಸುವ ಸನ್ನಿವೇಶ, ಯಾರಿಗೂ ಬರಲಾರದು ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದೇವೆ. ನನ್ನ ಟೀಕೆಯಲ್ಲಿ ಇರತಕ್ಕ ಶಬ್ದಗಳು ಕಠಿಣವಾದಾಗ್ಯೂ ಕೂಡಾ, ಮಾನ್ಯ ಮುಖ್ಯಮಂತ್ರಿಗಳಾಗಲೀ, ಇತರ ಮಂತ್ರಿಗಳು ಯಾರೇ ಆಗಲೀ ಅಥವಾ ಆಡಳಿತ ಪಕ್ಷದ ಸದಸ್ಯರು ಯಾರೇ ಆಗಲೀ ತುಚ್ಛ ಭಾವನೆಯಿಂದ ನಾನು ಮಾಡಿದ ಭಾಷಣಕ್ಕೆ ಯಾವಾಗಲೂ ಒಂದು ಚಕಾರವನ್ನು ಎತ್ತದೇ, ಅದನ್ನು ಸ್ವಾಗತಿಸಿದ್ದಕ್ಕೆ ನಾನು ಚಿರಋಣಿಯಾಗಿದ್ದೇನೆಂದು ಹೇಳುತ್ತೇನೆ. ನಾವು ಮಾತನಾಡಬಹುದು. ಆದರೆ ರಾಘವಾಂಕನು ಆಡಿದ ಒಂದು ಮಾತು ನನಗೆ ನೆನಪಿಗೆ ಬರುತ್ತದೆ. ''ಗಾನವಿನೋದಿ ಇರ್ದೊಡೇನ್, ಕೇಳುವವರಿಲ್ಲದಿರ್ದೊಡೇನ್, ಕೇಳಿ'' ನಾವು ಎಷ್ಟು ಬೇಕಾದರೂ ಪ್ರಾತನಾಡಬಹುದು. ಅದನ್ನು ಕೇಳಿ, ಅದರ ಬಗ್ಗೆ ವಿಶ್ವಾಸ ಮೂಡಿಸುವ ಜನರು ಇಲ್ಲವೇಹೋದರೆ ಆಡುವ ಮಾತಿಗೂ ಮಹತ್ವ ಬರುವುದಿಲ್ಲ. ಅದಕ್ಕೆ ಮೌಲ್ಯ ಸಿಗುವುದಿಲ್ಲ. ಆ ದೃಷ್ಟಿಯಿಂದ ಯಾವ ಸಂದರ್ಭದಲ್ಲಿ ಯಾವ ವಿಚಾರವನ್ನು ತೆಗೆದುಕೊಂಡು ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಅಧ್ಯಯನ ಮಾಡಿ, ಅಭ್ಯಾಸ ಮಾಡಿ, ವಿಷಯವನ್ನು ಸದನದ ಮುಂದಿಟ್ಟಾಗ, ನಾವು ಸದಸ್ಯರು ಪ್ರತಿಪಕ್ಷದಲ್ಲಿ ಇದ್ದೇವೆ ಎಂದೂ ಕಂಡರೂ ಕೂಡ ಅತಿ ವಿಶ್ವಾಸದಿಂದ ಸದಸ್ಯರು ಕೇಳಿದ್ದಾರೆ. ತಪ್ಪಾದಾಗ ಅದನ್ನು ತೋರಿಸಿಕೊಟ್ಟಿದ್ದಾರೆ. ಅದಕ್ಕಾಗಿ ನಾನು ಪ್ರತಿಪಕ್ಷದಲ್ಲಿ ಇರುವ ಪ್ರತಿಯೊಬ್ಬ ಸದಸ್ಯರೂ ಸಹಾ ನಾವು ಯಾವ ವಿಷಯವನ್ನು ಯಾವ ಧಾಟಿಯಲ್ಲಿ ಸಭೆಯ ಮುಂದೆ ಇಡಬೇಕೆನ್ನುವ ಬಗ್ಗೆ ಮಾರ್ಗದರ್ಶನ ಮಾಡಿದ್ದಾರೆ. ನಾವು ಮಾತನಾಡುವ ಸಂದರ್ಭದಲ್ಲಿ ಪ್ರೋತ್ಸಾಹ ನೀಡಿದ್ದಾರೆ. ಆ ದೃಷ್ಟಿಯಿಂದ ಎಲ್ಲ ಸದಸ್ಯರಿಗೂ ಧನ್ಯವಾದಗಳನ್ನರ್ಪಿಸುವುದು ನನ್ನ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಈ ದನದನ ಸರ್ವ ಅಂಗಗಳಲ್ಲಿರತಕ್ಕವರು, ಶಾಸಕಾಂಗದ ಎಲ್ಲಾ ಅಧಿಕಾರಿಗಳು ಮತ್ತು ಪ್ರತಿಕಾರಂಗದವರು ನಮ್ಮ ಭಾರತೀಯ ಜನತಾಪಕ್ಷದ ಮೇಲ್ಕೆಗೆ ನೆರವಾಗಿದ್ದಾರೆ, ಸಹಕಾರ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಾನು ಸದನದಲ್ಲಿ ವಿಷಯಗಳನ್ನು ಮಂಡಿಸುವ ಸಂದರ್ಭದಲ್ಲಿ ಸರ್ಕಾರಿ ಅಧಿಕಾರಿಗಳ ಬಗ್ಗೆ ಕೂಡಾ ಉಗ್ರವಾಗಿ ನಾಲ್ಕು ಮಾತುಗಳನ್ನು ಹೇಳಿರಬಹುದು. ಆದರೆ ಅದರಲ್ಲಿ ನನಗೆ ವೈಯುಕ್ತಿಕ ಭಾವನೆ ಏನೂ ಇಲ್ಲ. ಈ ದೇಶದ ಜನರ ಸಮಸ್ಯೆ

ಗಳನ್ನು ಬಗೆಹರಿಸುವ ದೃಷ್ಟಿಯಿಂದ ನಾನು ಮಾತನಾಡಿದಾಗ ಅಧಿಕಾರಿಗಳ ಮನಸ್ಸಿಗೆ ನೋವು ಆಗಿದ್ದರೆ ಈ ಸಂದರ್ಭದಲ್ಲಿ ಅವರು ನನ್ನನ್ನು ಕ್ಷಮಿಸುತ್ತಾರೆನ್ನುವ ಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಅವರಿಗೂ ಕೂಡಾ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ಕೊನೆಯದಾಗಿ, ಒಂದು ಮಾತನ್ನು ನಾನು ಹೇಳಬೇಕಾಗಿದೆ ಸೋಲು ಗೆಲುವು ಜೀವನದ ಒಂದು ಘಟ್ಟ ಅಲ್ಲ ರಾಜಕಾರಣದಲ್ಲಿ ನಾವು ಕಾಲನ್ನು ಇಟ್ಟಿದ್ದೇವೆ. ಎಲ್ಲಿರಲಿ, ಎಂತಿರಲಿ, ಹೇಗಾದರೂ ಇರಲಿ, ಈ ರಾಜ್ಯದ ಜನರ ಕ್ಷೇಮ ಚಿಂತನೆ ಮಾಡತಕ್ಕ ಹೊಣೆಗಾರಿಕೆ ಹೊತ್ತು ಕಂಕಣ ಕಟ್ಟಿ ಹೊರಕ್ಕೆ ಬಂದಿದ್ದೇವೆ. ಈ ರಾಜ್ಯದ ಜನ, ನೆಲಗಳ ಸಂರಕ್ಷಣೆಯಾಗಬೇಕಾಗಿದೆ ಜನರ ಜೀವನದ ಸಂವೃದ್ಧಿಗೆ ನಾವು ದುಡಿಯಬೇಕಾಗಿದೆ. ಈ ದಿಕ್ಕಿನಲ್ಲಿ ವ್ಯಕ್ತಿನಿಷ್ಠ ರಾಜಕಾರಣಗಳಾಗಿ, ನಮ್ಮ ಸೇವೆ ಸಲ್ಲಿಸುವಂತಹ ಹೊಣೆಗಾರಿಕೆಯನ್ನು ಈ ಸದನ ನಿಂದ ಪಡೆದು ನಾವು ಹೊರಗೆ ಹೋಗಬೇಕಾಗಿದೆ. ಈ ದಿಕ್ಕಿನಲ್ಲಿ ನಮ್ಮ ಆಶಾಭಾವನೆಗಳನ್ನು ಸದನದ ಮುಂದಿಡಲು ಅಧ್ಯಕ್ಷರಾಗಿ ತಾವು ಸಹಕಾರವನ್ನು ನಮಗೆ ಕೊಟ್ಟಿದ್ದೀರಿ ಹಿಂದೆ ಅಧ್ಯಕ್ಷರಾಗಿದ್ದವರೂ, ಉಪಸಭಾಧ್ಯಕ್ಷರೂ ನಮಗೆ ಸಹಾಕಾರವನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ಕೂಡಾ ನಾನು ಕೃತಜ್ಞತೆ ಗಳನ್ನು ಸಮರ್ಪಿಸುತ್ತಿದ್ದೇನೆ. ನಮ್ಮ ಜೀವನದಲ್ಲಿ ಪರಸ್ಪರ ಪ್ರೀತಿ, ವಿಶ್ವಾಸ, ಗೌರವಗಳನ್ನು ತೋರಿಸುತ್ತಾ ಹೋಗುವುದಾದರೆ ಎಲ್ಲರೂ ಶ್ರೇಯಸ್ಸನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಇಟ್ಟುಕೊಂಡು ಹೊರಗೆ ಹೋಗೋಣ. ಚುನಾವಣೆಯಲ್ಲಿ ವಿಜಯಶ್ರೀ ಯಾರಿಗೆ ಅನುಗ್ರಹಿಸುತ್ತಾಳೋ ನೋಡೋಣ. ಆಕೆಯ ಅನುಗ್ರಹ ನಮ್ಮ ಮೇಲೆ ಉಂಟಾದರೆ ಮತ್ತೊಮ್ಮೆ ನಾವೂ, ನೀವೂ ಇಲ್ಲಿ ಭೇಟಿ ಆಗೋಣ. ವಿರೋಧಪಕ್ಷದವರಾದ ನಾವುಗಳು ಹೇಳುವ ಮಾತುಗಳನ್ನು ನೀವು ಕೇಳಿ ಕರ್ನಾಟಕದ ಕೀರ್ತಿ ಪ್ರತಿಷ್ಠೆಯನ್ನು ಎತ್ತಿ ಹಿಡಿಯುವ ಕೆಲಸಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ನಮ್ಮ ಭಾರತೀಯ ಜನತಾ ಪಕ್ಷದ ಪರವಾಗಿ ಧನ್ಯವಾದಗಳನ್ನರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ)...—ಮಾನ್ಯ ಅಧ್ಯಕ್ಷರೆ, ಈ ಅಧಿವೇಶನ ಮುಕ್ತಾಯವಾಗುವ ದಿನವಾದ ಇಂದು ನಮ್ಮ ನಾಯಕರಾದಂಥ ಮಾನ್ಯ ಕಕ್ಕಿಲಾಯ ಅವರು ನಮ್ಮ ಪಕ್ಷದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಬೇಕಾಗಿತ್ತು. ಆದರೆ ಅವರ ಆರೋಗ್ಯ ಸರಿಯಿಲ್ಲದಿರುವುದರಿಂದ ಅವರ ಪರವಾಗಿ ಮತ್ತು ನಮ್ಮ ಪಕ್ಷದ ಪರವಾಗಿ ನಾನೇ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಮೊಟ್ಟ ಮೊದಲನೆಯದಾಗಿ, ೧೯೭೮ನೇ ಇಸವಿಯಲ್ಲಿ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಲು ನನಗೆ ಅವಕಾಶವನ್ನು ಮಾಡಿಕೊಟ್ಟಂಥ ಸನ್ಮಾನ್ಯ ದಿವಂಗತ ಡಿ. ದೇವರಾಜ ಅರಸ್‌ರವರನ್ನು ಈ ಸಂದರ್ಭದಲ್ಲಿ ನೆನೆಸುವುದು ನನ್ನ ಕರ್ತವ್ಯ. ಆಗ ನನಗೆ ಖಂಡಿತವಾಗಿ ವಿಧಾನ ಸಭಾ ಸದಸ್ಯನಾಗಲು ಅರ್ಹತೆ ಇರಲಿಲ್ಲ. ಆದರೂ ಕೂಡ ನಾನು ಒಬ್ಬ ಕಾರ್ಮಿಕ ಮುಖಂಡನೆಂಬ ಒಂದು ಅಭಿಮಾನದಿಂದ ಮಾನ್ಯ ದೇವರಾಜ ಅರಸರು ನನಗೆ ಅವಕಾಶವನ್ನು ಒದಗಿಸಿಕೊಟ್ಟರು. ಆದರಿಂದಾಗಿ ನಾನು ಇವತ್ತು ಈ ಸಭೆಗೆ ಒಬ್ಬ ಸದಸ್ಯನಾಗಿ ಆರಿಸಿಬರಲು ಸಾಧ್ಯವಾಯಿತು. ಇಲ್ಲಿಗೆ ಬಂದಮೇಲೆ ನಾವುಗಳು ಅನೇಕ ಸಾಧನೆಗಳನ್ನು ರಾಜ್ಯದ ಜನತೆಯ ಹಿತದೃಷ್ಟಿಯಿಂದ, ಅವರ ಏಳಿಗೆಗೋಸ್ಕರ ಸಾಧಿಸಬೇಕಾಗಿತ್ತು. ಆದರೆ ಆದರಲ್ಲಿ ಎಷ್ಟೋ ಸಾಧನೆಗಳನ್ನು ಈಡೇರಿಸಲು ಸಾಧ್ಯವಾಗಲಿಲ್ಲವೆಂದು ನನ್ನ ಮನಸ್ಸಿಗೆ ತುಂಬಾ ಖೇದವಾಗುತ್ತದೆ, ನಾವು ಇಲ್ಲಿಗೆ ಬರುವಾಗ ಏನೇನು ಕಲ್ಪನೆಗಳನ್ನು ಇಟ್ಟುಕೊಂಡು ಬರುತ್ತೇವೆ ಅವು ಗಳನ್ನು ಅಷ್ಟು ಸುಲಭವಾಗಿ ಸಾಧಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ನನ್ನ ಈ ೫ ವರ್ಷಗಳ ಅನುಭವದಿಂದ ತಿಳಿದುಕೊಂಡಿದ್ದೇನೆ.

ಮೊದಲನೆಯದಾಗಿ, ಈ ಸಮಾಜದಲ್ಲಿ ಬಡಜನರು ಯಾರಿದ್ದಾರೆ ಅವರ ಜೀವನಮಟ್ಟ, ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಬೇಕಾದಂಥ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಆದರೆ ನನ್ನ ಮನಸ್ಸಿನಲ್ಲಿ ಏನು ಅನಿಸುತ್ತದೆ ಎಂದರೆ, ಆ ಕಾರ್ಯಗಳನ್ನೆಲ್ಲಾ ವ್ಯವಸ್ಥಿತವಾಗಿ ಮಾಡಲು ಸಾಕಷ್ಟು ಅವಕಾಶ ಇಲ್ಲವೆಂದು ನನಗನ್ನಿಸುತ್ತದೆ. ಕಳೆದ ೫ ವರ್ಷಗಳಲ್ಲಿ ನಾನು ಭಾಗವಹಿಸಿದಂಥ ಅನೇಕ ಕಾರ್ಯಕ್ರಮಗಳಲ್ಲಿ ತಲೆದೋರಿದಂಥ ಹಲವಾರು ತೊಡಕುಗಳನ್ನು ಆಡಳಿತ ಪಕ್ಷದವರು ನಿವಾರಿಸಿಕೊಟ್ಟಿರುವುದರಿಂದ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನ್ನ ಕ್ಷೇತ್ರದ ಅಭಿವೃದ್ಧಿ ಕಾರ್ಯದ ಬಗ್ಗೆ ಮಂತ್ರಿಮಂಡಲದ ಗಮನವನ್ನು ಸೆಳೆದಾಗ ಅವರೆಲ್ಲರೂ ಕೂಡ ತಮ್ಮ ಸಹಕಾರವನ್ನು ನೀಡಿದ್ದಾರೆ ನಾವು ವಿರೋಧ ಪಕ್ಷದವರಾಗಿದ್ದರೂ ಕೂಡ ನಮ್ಮೊಡನೆ ಸಹಕರಿಸಿದ್ದಾರೆ. ನಮ್ಮ ಪಕ್ಷದಲ್ಲಿರತಕ್ಕ ಎಲ್ಲ ಮಾನ್ಯ ಸದಸ್ಯರೂ ನಮ್ಮ ಪಕ್ಷದ ಧ್ಯೇಯೋದ್ದೇಶಗಳನ್ನು ಅತ್ಯಂತ ನಿಷ್ಠೆಯಿಂದ ಪಾಲಿಸಿಕೊಂಡು ಬಂದಿದ್ದಾರೆ. ಬರುವ ಜನವರಿ ೫ರಂದು ನಡೆಯಲಿರುವ ಚುನಾವಣೆಯಲ್ಲಿ

ನೆಮ್ಮ ಈ ಎಲ್ಲ ಸದಸ್ಯರೂ ಮತ್ತೊಮ್ಮೆ ಆರಿಸಿಬಂದು ಜನತೆಯ ಸಂಕಷ್ಟಗಳನ್ನು ಪರಿಹರಿಸುವರೆಂಬ ದೃಢ ನಂಬಿಕೆ ನನಗಿದೆ. ಪ್ರಜಾಪ್ರಭುತ್ವದಲ್ಲಿ ಸರ್ಕಾರ ಚೆನ್ನಾಗಿ ಕೆಲಸ ಮಾಡಬೇಕಾದರೆ ಆಡಳಿತಪಕ್ಷ ಮತ್ತು ಪ್ರತಿಪಕ್ಷಗಳು ಸ್ವಲ್ಪ ಹೆಚ್ಚೂ ಕಡಿಮೆ ಒಂದೇ ಸಮನಾಗಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಆದಕ್ಕೆ ಬದಲಾಗಿ ಆಡಳಿತಪಕ್ಷ ಅತಿ ಹೆಚ್ಚು ಸಂಖ್ಯೆಯಲ್ಲಿದ್ದು, ಪ್ರತಿಪಕ್ಷ ಅತಿ ಕಡಿಮೆ ಸಂಖ್ಯೆಯಲ್ಲಿದ್ದರೆ ಸರ್ಕಾರದ ಆಡಳಿತ, ಸರ್ಕಾರದ ಧೋರಣೆ, ಅಷ್ಟು ಚೆನ್ನಾಗಿರುವುದಿಲ್ಲ ಅಲ್ಲದೆ ಜನತೆಗೆ ಒಳ್ಳೆಯ ಆಡಳಿತವನ್ನು ಒದಗಿಸುವುದಕ್ಕಾಗುವುದಿಲ್ಲ. ನಮ್ಮ ಕರ್ನಾಟಕದ ಜನತೆ ಮುಖ್ಯವಾಗಿ ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಆಡಳಿತ ಪಕ್ಷಕ್ಕೆ ಎಷ್ಟು ಅವಕಾಶವನ್ನು ಕೊಡಬೇಕೋ ಅಷ್ಟನ್ನು ಮಾತ್ರ ಕೊಟ್ಟು ಹೆಚ್ಚಿನ ರೀತಿಯಲ್ಲಿ ಪ್ರತಿಪಕ್ಷವನ್ನು ಬೆಳೆಸುವ ಮನಸ್ಸುಮಾಡಬೇಕು. ಕಳೆದ ೫ ವರ್ಷಗಳಿಂದ ಆಡಳಿತ ಪಕ್ಷದವರು ನಮ್ಮ ಪ್ರತಿಪಕ್ಷದವರೊಡನೆ ಮೈತ್ರಿ ಭಾವದಿಂದಿದ್ದು ನಾವು ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಅವಕಾಶವನ್ನು ಒದಗಿಸಿಕೊಡುತ್ತಿದ್ದರು. ಇವತ್ತು ಎಲ್ಲಕ್ಕಿಂತಲೂ ಮುಖ್ಯವಾಗಿ ತಾವು ಈ ಸ್ಥಾನದಲ್ಲಿ ಕುಳಿತು ವಿರೋಧ ಪಕ್ಷದವರಿಗೆ ಅನೇಕ ಅವಕಾಶಗಳನ್ನು ಕಲ್ಪಿಸಿಕೊಟ್ಟು, ನಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಸಹಕರಿಸಿದ ತಮಗೂ, ಮಾನ್ಯ ಮುಖ್ಯ ಮಂತ್ರಿಗಳಿಗೂ, ಅವರ ಮಂತ್ರಿ ಮಂಡಲದ ಸದಸ್ಯರಿಗೂ, ಈ ಸದನದಲ್ಲಿ ನಡೆದಂಥ ಕಾರ್ಯಕಲಾಪಗಳನ್ನು ಚೊಕ್ಕಟವಾಗಿ ಪತ್ರಿಕೆಗಳ ಮೂಲಕ ಜನಗ ಗಮನಕ್ಕೆ ತಂದು ಅವರನ್ನು ಜಾಗೃತಿಗೊಳಿಸಿದ ಪತ್ರಿಕಾ ವರದಿಗಾರರಿಗೂ, ನಮ್ಮ ವಿಧಾನ ಮಂಡಲದ ಕಾರ್ಯದರ್ಶಿ ಹಾಗೂ ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ಕಮ್ಯುನಿಸ್ಟ್ ಪಕ್ಷದ ಪರವಾಗಿ ಹೃತ್ಪೂರ್ವಕ ವಂದನೆಗಳನ್ನರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI QUMARUL ISLAM (Gulbarga).—Mr. Speaker Sir, when I entered this August House, I was a boy of 26–27 years with little experience but when I am leaving this House, I am an young man with 5 years of legislature experience in the public work. When I presented myself in 1978 before the people of Gulbarga, they were fully aware that Qumarul Islam is not representing the Congress or the Janatha or any other party but he is representing a very small party and that is the Indian Union Muslim League. I think I have kept up the confidence of the people of Gulbarga in particular and the minorities and the weaker sections in general. Sir, when I entered this August House, I was having lot of ambitions. I never had the ambition to sit on that side. I never had the ambition of any other thing except that I must put-forth the grievances of the people at the proper time, whichever Government may be in power. When I came here, Late Sri D. Devaraj Urs was the Chief Minister but I am very lucky that I have seen two Governments and I have seen many Ministers who are in power now and also who are now in the Opposition. Sir, I have also seen number of opposition members who are now in the treasury bench. Sir, in democratic set up, there should be a powerful opposition to establish secular and democratic norms. So, I believe in a strong opposition and I also believe that our country is a multi-cultural and multi-linguistic country and every community has got a right to consolidate itself and to form a party of its own to put-forth the grievances of the people, and to further their educational, economical and cultural developments. Sir, with that ambition, I entered the Indian Muslim League and in Trivandrum once Pandit Jawaharlal Nehru has said that the Indian Muslim League is a symbol of secularism. Sir, when we had the alliance with the Congress,

Panditji made a speech in Trivandrum where he showed it to the world that our's is a multi-cultural and mult-linguistic country and here every community has got a right to consolidate itself and form the political parties of their own. At that time, Panditji has said that the Indian Muslim League is the Symbol of Secularism.

If I enter with some more Members of Indian Union Muslim League along with me in the coming Assembly I will be establishing secularism and deepening the norms of secularism and democracy. I must thank the Chief Minister and Members belonging to the Oppositions and particularly to you sir for having given me fullest co-operation to speak on the floor of the House on each and every subject. I used to put forth the grievances of minorities to see that they should not feel insecure. Always you had expended your helping hand whenever I wanted to air my people's grievances. With these few words I thank you once again and conclude my speech.

Announcement

MR SPEAKER —Before I adjoun the House, I would like to give a brief review of business transacted by the House during the period from 1978 to 1982.

The Sixth Karnataka Legislative Assembly wat constituted on 27th February 1978. The first sitting of the Legislative Assembly was held on Friday the 17th March 1978. In all, so far there have been eight sessions and the House sat for 337 days.

GOVERNOR'S ADDRESS :

Under Article 175(1) of the Constitution, the Governor had addressed the two Houses of Legislature five times namely. First, Second. Third, Fourth and Seventh Sessions of the Sixth Legislative Assembly. The matters referred to in their addresses were discussed in detail on each occasion on a motion of thanks. The discussion took place for 30 days.

OBITUARY REFERENCES :

The House made obituary references to 108 deceased Members and other dignatories during the period under review.

ADJOURNMENT MOTIONS :

33 notice of Adjournment motions were received but none of them were admitted.

QUESTIONS :

3277 Starred Questions were admitted and answered on the floor of the House. Answers for 208 Un-starred questions were laid